# A STUDY OF RELATIONSHIP BETWEEN INTERACTIVE PROCESS AND THE LEVEL OF PARTICIPATION OF THE STUDENTS

(Kannada)

## ACTION RESEARCH

done by :

**H.N. GEETHAMBA**
Lecturer,
Govt. College of Teacher Education
J.L.B. Road, Mysore - 05.

Submitted to :

**REGIONAL INSTITUTE OF EDUCATION, MYSORE**

(National Council of Educational Research and Training, New Delhi)

**2004–05**

# ಅನ್ಯೋನ್ಯ-ಕ್ರಿಯಾ ಪ್ರಕ್ರಿಯೆ ಮತ್ತು ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯ ಮಟ್ಟ ಇವುಗಳ ನಡುವೆ ಇರುವ ಸಂಬಂಧದ ಒಂದು ಅಧ್ಯಯನ

## ಕ್ರಿಯಾ ಸಂಶೋಧನೆ

ಮಾಡಿದವರು :


**ಹೆಚ್.ಎನ್. ಗೀತಾಂಬ**

ಉಪನ್ಯಾಸಕರು,

ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ,

ಜೆ.ಎಲ್.ಬಿ. ರಸ್ತೆ, ಮೈಸೂರು-05.


ಇವರಿಗೆ ಸಲ್ಲಿಸಿದೆ :


**ಪ್ರಾದೇಶಿಕ ಶಿಕ್ಷಣ ಸಂಸ್ಥೆ, ಮೈಸೂರು**

(ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ನವದೆಹಲಿ)

2004-05

# ಕೃತಜ್ಞತೆಗಳು


ಶಿಕ್ಷಣ ಕ್ಷೇತ್ರದಲ್ಲಿ ಕ್ರಿಯಾ ಸಂಶೋದನೆಯು ಮಹತ್ವದ ಪಾತ್ರವನ್ನು ವಹಿಸುತ್ತದೆ. ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆಯನ್ನು ನಿರೀಕ್ಷಿಸುತ್ತಿರುವ ಎಲ್ಲರಿಗೂ ಇದು ಉಪಯುಕ್ತವಾದುದಾಗಿದೆ. ಪ್ರತಿಯೊಬ್ಬ ವೃತ್ತಿನಿರತನೂ ಕ್ರಿಯಾ ಸಂಶೋದನೆಯನ್ನು ಕೈಗೊಂಡು ತಮ್ಮ ವೃತ್ತಿಯಲ್ಲಿ ಬೆಳವಣಿಗೆಯನ್ನು ಸಾಧಿಸುವುದು ಇಂದು ಅತ್ಯವಶ್ಯಕವಾಗಿದೆ. ಈ ದಿಶೆಯಲ್ಲಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯದವರು ರಾಜ್ಯದಲ್ಲಿರುವ ಸಿ.ಟಿ.ಇ ಉಪನ್ಯಾಸಕರುಗಳಿಗೆ ಕ್ರಿಯಾ ಸಂಶೋಧನೆಯ ಬಗ್ಗೆ ತರಬೇತಿ ನೀಡಲು ಮುಂದೆ ಬಂದು ನಮ್ಮಗಳಿಗೆ ತರಬೇತಿ ಪಡೆಯಲು ಅವಕಾಶ ಕಲ್ಪಿಸಿಕೊಟ್ಟಿರುವುದು ಶ್ಲಾಘನೀಯ ಹಾಗೂ ಈ ಸಂಸ್ಥೆಗೆ ನನ್ನ ಕೃತಜ್ಞತಾ ಪೂರ್ವಕವಾದ ವಂದನೆಗಳು.

ಈ ಸಂಬಂಧ ತರಬೇತಿಯನ್ನು ವ್ಯವಸ್ಥೆಗೊಳಿಸಿದ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಇನ್ನು ನಾವುಗಳು ಈ ತರಬೇತಿಯನ್ನು ಪಡೆದು ನಮ್ಮದೇ ಆದ ಒಂದು ಚೊಚ್ಚಲ ಕಿಯಾ ಸಂಶೋಧನೆ ಕೈಗೊಳ್ಳಲು ಪ್ರಾದೇಶಿಕ ಶಿಕ್ಷಣ ಸಂಸ್ಥೆ, ಮೈಸೂರು ಇಲ್ಲಿಗೆ, ನಮ್ಮನ್ನು ನಿಯೋಜಿಸಿದ ನಮ್ಮ ಸಿ.ಟಿ.ಇ ಪ್ರಾಂಶುಪಾಲರಾದ **ಶ್ರೀಮತಿ ಕೆ. ಉಷಾದೇವಿಯವರಿಗೆ** ಹೃತ್ಪೂರ್ವಕ ಕೃತಜ್ಞತೆಗಳು.

ನಾವು ಕೈಗೊಂಡಿರುವ ಈ ಕ್ರಿಯಾ ಸಂಶೋಧನೆಯ ಯಶಸ್ಸಿಗೆ ಪ್ರತಿ ಹೆಜ್ಜೆಯಲ್ಲಿಯೂ ಮಾರ್ಗದರ್ಶನ ಮಾಡಿದ **ಪ್ರೊ.ಎ.ವಿ. ಗೋವಿಂದರಾವ್, ಡಾ॥ ವಿ.ಡಿ. ಭಟ್, ಡಾ॥ ಬಿ. ಫಾಲಚಂದ್ರ, ಡಾ॥ ಸಿ.ಜಿ.ವಿ. ಮೂರ್ತಿ, ಡಾ॥ ವಿಶ್ವನಾಥಪ್ಪ, ಪ್ರೊ. ಲಲಿತಮ್ಮ** ಎಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಇನ್ನು ಈ ಕ್ರಿಯಾ ಸಂಶೋಧನೆ ತರಬೇತಿ ಕಾರ್ಯಾಗಾರವನ್ನು ವ್ಯವಸ್ಥೆಗೊಳಿಸಿದ, ಸಕಾಲದಲ್ಲಿ ನಮಗೆ ಮಾರ್ಗದರ್ಶನ ಮಾಡಿದ ತರಬೇತಿ ಸಂಯೋಜನಾಧಿಕಾರಿಗಳಾದ **ಡಾ॥ ಕೆ. ಅನಿಲ್ ಕುಮಾರ್,** ಉಪನ್ಯಾಸಕರು, ಪ್ರಾದೇಶಿಕ ಶಿಕ್ಷಣ ಸಂಸ್ಥೆ, ಮೈಸೂರು ಇವರಿಗೆ ನನ್ನ ಹೃದಯ ಪೂರ್ವಕ ವಂದನೆಗಳು.

ಈ ಕ್ರಿಯಾ ಸಂಶೋಧನೆಯನ್ನು ವರದಿಯನ್ನು ತಯಾರಿಸಲು ಸಹಕರಿಸಿದ ನನ್ನ ಹಿರಿಯ ಸಹೋದ್ಯೋಗಿ ಮಿತ್ರರಿಗೆ ಮತ್ತು ನನ್ನ ಕುಟುಂಬದ ಸದಸ್ಯರೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳು.



**ಹೆಚ್.ಎಸ್. ಗೀತಾಂಬ,**
ಉಪನ್ಯಾಸಕರು,
ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ,
ಮೈಸೂರು.

# ಪರಿವಿಡಿ


1. ಶೀರ್ಷಿಕೆ
2. ಕೃತಜ್ಞತೆಗಳು
3. ಪರಿವಿಡಿ


## ಅಧ್ಯಾಯ I

ಹಿನ್ನಲೆ


| | | |
|---|---|---|
| 1.1. | ಸಿ.ಟಿ.ಇ ಯ ಹಿನ್ನಲೆ | 2 |
| 1.2. | ಕಾರ್ಯ ವ್ಯಾಪ್ತಿ | 5 |
| 1.3. | ಕಾಲೇಜಿನ ಸಿಬ್ಬಂದಿ ವರ್ಗ | 5 |
| 1.4. | ಪ್ರಸ್ತುತ ವರ್ಷದಲ್ಲಿ ಸಿಬ್ಬಂದಿವರ್ಗ ಮತ್ತು ವಿದ್ಯಾರ್ಥಿಗಳ ಸಾಮರ್ಥ್ಯ | 5 |
| 1.5. | ಕಟ್ಟಡ | 6 |
| 1.6. | ಕೆಲಸದ ವೇಳೆ | 6 |
| 1.7. | ಸಂಸ್ಥೆಯಲ್ಲಿರುವ ಸೌಲಭ್ಯಗಳು | 6 |
| 1.8. | ಸಂಶೋಧಕರ ಬಗ್ಗೆ | 7 |
| 1.9. | ಸಿ.ಟಿ.ಇ ಯಲ್ಲಿ ಉಪನ್ಯಾಸಕಿಯಾಗುವುದಕ್ಕಿಂತ ಮುಂಚಿನ ಅನುಭವ | 7 |
| 1.10. | ಸಿ.ಟಿ.ಇ ಯಲ್ಲಿ ಉಪನ್ಯಾಸಕಿಯಾಗಿ ಅನುಭವ | 8 |
| 1.11. | ಕರ್ತವ್ಯ ಮತ್ತು ಜವಾಬ್ದಾರಿಗಳು | 8 |

## ಅಧ್ಯಾಯ II


ಕಾಳಜಿ

| | | |
|---|---|---|
| 2.1 | ಅಸಮಾಧಾನ ಪರಿಸ್ಥಿತಿ | 10 |
| 2.2 | ಅಸಮಾಧಾನ ಪರಿಸ್ಥಿತಿಯ ವಿಶ್ಲೇಷಣೆ | 10 |
| 2.3 | ಸಂಭವನೀಯ ಕಾರಣಗಳು | 11 |
| 2.4 | ಸೈದ್ಧಾಂತಿಕ ನೆಲೆಗಟ್ಟು | 11 |
| 2.5 | ಸೈದ್ಧಾಂತಿಕ ನೆಲೆಗಟ್ಟಿನ ಪ್ರಾಥಮೀಕರಣ | 12 |
| 2.6 | ಕ್ರಿಯಾ ಪ್ರಾಕಲ್ಪನೆ | 12 |


## ಅಧ್ಯಾಯ III


ಮಧ್ಯವರ್ತನಾ ಚಟುವಟಿಕೆಗಳ ಯೋಜನೆ ಮತ್ತು ಅನುಷ್ಠಾನ

| | | |
|---|---|---|
| 3.1 | ಕಾರ್ಯಭಾಗಿ ಗುಂಪು | 13 |
| 3.2 | ಕಾರ್ಯಪಟ್ಟಿ | 13 |
| 3.3 | ಅನುಷ್ಠಾನ | 14 |
| 3.4 | ಮಾಹಿತಿ ವಿಶ್ಲೇಷಣೆ | 17 |
| 3.5 | ಮೌಲ್ಯಮಾಪನ | 21 |
| 3.6 | ಸ್ವವಿಮರ್ಶೆ ಮತ್ತು ಕೈಗೊಂಡ ನಿರ್ಧಾರಗಳು | 21 |
| 3.7 | ಸಲಹೆಗಳು | 24 |

ಅನುಬಂಧಗಳು 25

ಪರಾಮರ್ಶನ ಗ್ರಂಥಗಳು 28

# ಅಧ್ಯಾಯ – I

# ಹಿನ್ನೆಲೆ

## 1.1 ಸಿ.ಟಿ.ಇ ಯ ಹಿನ್ನಲೆ

ನಮ್ಮ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯವು ಭವ್ಯವಾದ ಇತಿಹಾಸವನ್ನು ಹೊಂದಿದೆ. ಇದು ಒಂದು ಪ್ರತ್ಯೇಕ ಸಂಸ್ಥೆಯಾಗಿ ಅಸ್ತಿತ್ವಕ್ಕೆ ಬಂದದ್ದು ಮೂವತ್ತರ ದಶಕದಲ್ಲಾದರೂ ಇದರ ಬೀಜಾಂಕುರವಾದದ್ದು 1914ರಲ್ಲಿ. ಇದಕ್ಕೆ ಮೊದಲು ಶಿಕ್ಷಕ ವೃತ್ತಿಯ ತರಬೇತಿಯನ್ನು ಬಯಸುವವರನ್ನು ಚೆನ್ನೈನ ಸೈದಾಪೇಟೆಯಲ್ಲಿದ್ದ ಶಿಕ್ಷಕರ ತರಬೇತಿ ಸಂಸ್ಥೆಗೆ ಕಳುಹಿಸಿಕೊಡಲಾಗುತ್ತಿತ್ತು. ಕಾರಣಾಂತರಗಳಿಂದ ಆ ವರ್ಷ ಕರ್ನಾಟಕದ ಅಭ್ಯರ್ಥಿಗಳಿಗೆ ಪ್ರವೇಶವನ್ನು ನಿರಾಕರಿಸಲಾಯಿತು. ಆಗ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಿ ಇಲ್ಲಿಯೂ ಅಂತಹ ತರಬೇತಿ ಸಂಸ್ಥೆಯನ್ನು ತೆರೆಯಲು ನಿಶ್ಚಯಿಸಿತು. ಇದರ ಫಲವಾಗಿ ಮೈಸೂರಿನ ನಾರ್ಮಲ್ ಶಾಲೆಯಲ್ಲಿ ತರಬೇತಿ ಕೋರ್ಸ್ ಒಂದು ಆರಂಭವಾಯಿತು. ಆಗ ನಿಯೋಜಿಸಲಾಗುತ್ತಿದ್ದ ಶಿಕ್ಷಕರ ಸಂಖ್ಯೆ 6 ಮಾತ್ರ. 1923–24ರಲ್ಲಿ ಈ ಸಂಖ್ಯೆ 12ಕ್ಕೇರಿತು. 1925–26ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಬಿ.ಟಿ. ತರಗತಿಗಳನ್ನು ಪ್ರಾರಂಭಿಸಿತು.

ಅಸ್ತಿತ್ವಕ್ಕೆ ಬಂದ 21 ವರ್ಷಗಳ ತರುವಾಯ ಅಂದರೆ 1947ರಲ್ಲಿ ಸಂಸ್ಥೆ ಸ್ವತಂತ್ರವಾದ ಕಟ್ಟಡವನ್ನು ಪಡೆಯಿತು. ಅಲ್ಲದೆ ಸಂಪೂರ್ಣವಾಗಿ ಪ್ರತ್ಯೇಕವಾದ ಸಂಸ್ಥೆಯಾಯಿತು. ಭಾರತ ಸ್ವತಂತ್ರವಾದ ವರ್ಷದಲ್ಲೇ ಕಾಲೇಜು ಪೂರ್ಣ ಪ್ರಮಾಣಕ್ಕೆ ಬೆಳೆದದ್ದು ಒಂದು ಸುಯೋಗವೇ ಸರಿ. ಕಾಲೇಜು ಅಂದು ಇಂದಿನ ಮರಿಮಲ್ಲಪ್ಪ ಪ್ರೌಢಶಾಲೆಯ ಕಟ್ಟಡದಲ್ಲಿ ನಡೆಯುತ್ತಿತ್ತು. ಕೆಲವೇ ದಿನಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಈ ಕಾಲೇಜು ಸೇರಿದಂತೆ ಪ್ರೌಢಶಾಲೆ, ಪ್ರಾಥಮಿಕ ಶಾಲೆಗಳನ್ನು ತನ್ನ ಅಧೀನಕ್ಕೆ ತೆಗೆದುಕೊಂಡಿತು. ಸಂಸ್ಥೆಯು 1952ರಲ್ಲಿ ತನ್ನ ರಜತ ಮಹೋತ್ಸವವನ್ನಾಚರಿಸಿತು. 1953ರಲ್ಲಿ ಈ ತರಬೇತಿಯು ಬಿ.ಎಡ್ ಎಂಬ ಅಭಿದಾನ ಪಡೆಯಿತು. ಕೆಲವೇ ವರ್ಷಗಳಲ್ಲಿ ಶಿಕ್ಷಣ ಇಲಾಖೆಯು ಇದನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಫಲ ಸ್ವರೂಪವಾಗಿ ಇದು ಸರ್ಕಾರಿ ಶಿಕ್ಷಣ ಕಾಲೇಜಾಗಿ ಪುನರ್ನಾಮಕರಣಗೊಂಡಿತು.

ಕಾಲೇಜು ನಡೆದು ಬಂದ ಹಾದಿಯಲ್ಲಿ ಗುರುತಿಸಬಹುದಾದ ಘಟ್ಟಗಳೆಂದರೆ 1957ರಲ್ಲಿ ಆರಂಭವಾದ ಸಂಜೆ ಬಿ.ಎಡ್, ಕಾಲೇಜು ಹಾಗೂ 1956 ರಲ್ಲಿ ಆರಂಭವಾದ ಎಂ.ಎಡ್. ತರಗತಿಗಳು. ಕರ್ನಾಟಕದ ಯಾವುದೇ ಸಂಸ್ಥೆಯಲ್ಲಿರದ ಕೋರ್ಸ್‌ಗಳು ಇಲ್ಲಿ ಆರಂಭವಾದದ್ದು ಈ ಕಾಲೇಜು ಅಂದು ಹೊಂದಿದ್ದ ಸ್ಥಾನಮಾನಗಳನ್ನು ಕುರಿತು ಹೇಳುತ್ತದೆ. ಹಾಗೆಯೇ ಅಖಿಲ

ಭಾರತ ಪ್ರೌಢಶಿಕ್ಷಣ ಮಂಡಲಿಯ ಶಿಫಾರಸ್ಸಿನಂತೆ ಇಲ್ಲಿ ಆರಂಭವಾದ ವಿಸ್ತರಣಾ ಶಾಖೆ ನಿರೀಕ್ಷೆಗೂ ಮೀರಿ ಸೇವಾಂತರ್ಗತ ತರಬೇತಿಗಳನ್ನು ನಡೆಸಿತು.

ಕೇಂದ್ರ ಸರ್ಕಾರದ ಯೋಜನೆಯಂತೆ 1993-94 ರಲ್ಲಿ ಕಾಲೇಜನ್ನು ಮೇಲ್ದರ್ಜೆಗೇರಿಸಿ ಶಿಕ್ಷಣ ಮಹಾವಿದ್ಯಾಲಯವೆಂದು ಪುನರ್ನಾಮಕರಣ ಮಾಡಲಾಯಿತು. ಬರಿಯ ಸೇವಾಪೂರ್ವ ತರಬೇತಿಯೇ ಪ್ರಧಾನವಾಗಿವಾಗಿದ್ದ ಈ ಸಂಸ್ಥೆಯ ಕಾರ್ಯ ವ್ಯಾಪ್ತಿ ಹೆಚ್ಚಾಯಿತು.

1986 ರ ರಾಷ್ಟ್ರೀಯ ಶಿಕ್ಷಣ ನೀತಿಯು (NPE) ಶಿಕ್ಷಣ ಕ್ಷೇತ್ರದಲ್ಲಿ ಅದರಲ್ಲೂ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಒಂದು ಮೈಲಿಗಲ್ಲಾಗಿದೆ. ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆಗೆ ಶಿಕ್ಷಕರ ತರಬೇತಿಯು ಪ್ರಮುಖ ಪಾತ್ರ ನಿರ್ವಹಿಸುತ್ತದೆಂಬುದನ್ನು ಅದು ಮನಗಂಡಿದೆ. ಅಸಾಧ್ಯ ಸಂಖ್ಯೆಯಲ್ಲಿರುವ ಶಿಕ್ಷಕ ಸಮುದಾಯಕ್ಕೆ ಕನಿಷ್ಠ 5 ವರ್ಷಗಳಿಗೊಮ್ಮೆಯಾದರೂ ಪುನಶ್ಚೇತನ ರೂಪವಾದ ಸೇವಾವಧಿ ತರಬೇತಿ ಸಿಗಬೇಕೆಂಬುದು 1986ರ ಶಿಕ್ಷಣ ನೀತಿಯ ಆಶಯವಾಗಿದ್ದು ಇದನ್ನು ಜಾರಿಗೊಳಿಸಲು ಪ್ರತಿ ಜಿಲ್ಲಾ ಕೇಂದ್ರಗಳಲ್ಲಿಯೂ ಡಯಟ್‌ಗಳನ್ನು ಸರ್ಕಾರಿ ಶಿಕ್ಷಕ ಶಿಕ್ಷಣ ತರಬೇತಿ ಸಂಸ್ಥೆಗಳನ್ನು ಉನ್ನತೀಕರಿಸುವ ಮೂಲಕ ಸ್ಥಾಪಿಸಲಾಯಿತು.

ಅಂತೆಯೇ ಪ್ರೌಢಶಿಕ್ಷಣದ ಗುಣಮಟ್ಟ ಕಾಯ್ದುಕೊಂಡು ಅಭಿವೃದ್ಧಿ ಪಡಿಸಲು ಘನ ಸರ್ಕಾರದ ಅಧೀನದಲ್ಲಿದ್ದ ಆರು ಶಿಕ್ಷಕ ಮಹಾ ವಿದ್ಯಾಲಯಗಳನ್ನು ಉನ್ನತೀಕರಿಸಿ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳೆಂದು ಪುನರ್ ನಾಮಕರಣಗೊಳಿಸಲಾಯಿತು. ತದನಂತರದಲ್ಲಿ ನಾಲ್ಕು ಖಾಸಗಿ ಶಿಕ್ಷಕ ಮಹಾವಿದ್ಯಾಲಯಗಳನ್ನು ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳಾಗಿ ಉನ್ನತೀಕರಿಸಲಾಗಿದೆ. ಹಾಗೇ ಹಾಲಿ ಇರುವ ಹತ್ತು ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ನಮ್ಮ ಕಾಲೇಜು ಕೂಡ ಒಂದಾಗಿರುತ್ತದೆ. ಸರ್ಕಾರಿ ವಲಯದಲ್ಲಿರುವ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳಿಗೆ ಶೈಕ್ಷಣಿಕ ಆಡಳಿತಗಳಲ್ಲಿ ಖಾಸಗಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳಿಗಿಂತ ಹೆಚ್ಚಿನ ಅಧಿಕಾರ ಮತ್ತು ಹೊಣೆ ಇರುತ್ತದೆ. ಸರ್ಕಾರಿ ವಲಯದ ಆರು ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳಿಗೆ ತಮ್ಮ ವ್ಯಾಪ್ತಿಯ ಪ್ರೌಢಶಿಕ್ಷಣ ಕ್ಷೇತ್ರದ ಶೈಕ್ಷಣಿಕ ಕಾರ್ಯಕ್ರಮಗಳ ಮೇಲ್ವಿಚಾರಣೆ, ಅನುಪಾಲನೆ ಜವಾಬ್ದಾರಿಗಳೂ ಕೂಡ ಇದೆ.

ನಮ್ಮ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯವು 3 ವಿಭಾಗಗಳನ್ನು ಒಳಗೊಂಡಿದೆ. ಅವುಗಳೆಂದರೆ

1. ಸೇವಾಪೂರ್ವ ತರಬೇತಿ ವಿಭಾಗ
2. ಸೇವಾಂತರ್ಗತ ವಿಭಾಗ
3. ಕ್ರಿಯಾ ಸಂಶೋಧನೆ ವಿಭಾಗ.

ಸೇವಾಪೂರ್ವ ತರಬೇತಿ ವಿಭಾಗವು 100 ಜನ ಪ್ರಶಿಕ್ಷಣಾಧಿಕಾರಿಗಳಿಗೆ ಪಾಠಬೋಧನೆ, ಪಾಠಯೋಜನೆಯ ಬಗ್ಗೆ ಕಾರ್ಯಾಗಾರ, ಅಣುಬೋಧನೆ, ಪ್ರದರ್ಶನ ಪಾಠ, ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ, ದೈಹಿಕ ಶಿಕ್ಷಣ ತರಬೇತಿ, ಸಾಮಾಜಿಕ ಉಪಯುಕ್ತತಾ ಉತ್ಪಾದನಾ ಕಾರ್ಯ ಮುಂತಾದ ಶೈಕ್ಷಣಿಕ ಚಟುವಟಿಕೆಗಳನ್ನು ಒಳಗೊಂಡಿದೆ.

ಸೇವಾಂತರ್ಗತ ವಿಭಾಗವು ಸೇವಾಪೂರ್ವ ತರಬೇತಿಗಳನ್ನು ನೀಡುವ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದಿದ್ದು ಡಿ.ಎಸ್.ಇ.ಆರ್.ಟಿ. ವತಿಯಿಂದ ಮತ್ತು ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿಯಲ್ಲಿ ವಿವಿಧ ರೀತಿಯ ತರಬೇತಿಗಳನ್ನು ನೀಡುವ ಕಾರ್ಯವನ್ನು ನಿರ್ವಹಿಸುತ್ತದೆ.

ಕ್ರಿಯಾ ಸಂಶೋಧನಾ ವಿಭಾಗವು ಪ್ರೌಢಶಾಲಾ ಸಹಶಿಕ್ಷಕರು ತಮ್ಮ ತಮ್ಮ ಶಾಲೆಗಳಲ್ಲಿ ಸಂಬಂಧಪಟ್ಟ ವಿಷಯಗಳಲ್ಲಿ ಕ್ರಿಯಾ ಸಂಶೋಧನೆ ಕೈಗೊಳ್ಳಲು ಮಾರ್ಗದರ್ಶನ, ಮತ್ತು ಸಂಪನ್ಮೂಲಗಳನ್ನು ಒದಗಿಸುವುದು ಮತ್ತು ಧನ ಸಹಾಯ ಮಾಡುವ ಉದ್ದೇಶಗಳನ್ನು ಒಳಗೊಂಡಿದ್ದು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

ಮೇಲಿನ ಮೂರು ವಿಭಾಗಗಳಿಗೂ 3 ಜನ ಪ್ರವಾಚಕರು ಪ್ರಭಾರದಲ್ಲಿದ್ದು ಸಕಾಲದಲ್ಲಿ ಮಾರ್ಗದರ್ಶನ ಮಾಡಿ ಸಂಸ್ಥೆಯ ಕೆಲಸ ಸುಲಲಿತವಾಗಿ ನಡೆಯುವಂತೆ ನೋಡಿಕೊಳ್ಳಲಾಗಿದೆ.

## 1.2 ಕಾರ್ಯ ವ್ಯಾಪ್ತಿ

ಈ ಸಂಸ್ಥೆಯ ಕಾರ್ಯವ್ಯಾಪ್ತಿ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ ಪ್ರೌಢಶಾಲಾ ಶಿಕ್ಷಕರುಗಳಿಗೆ ಸೇವಾಂತರ್ಗತ ತರಬೇತಿ ನೀಡುವುದಾಗಿದೆ. ಅಲ್ಲದೆ ಮೇಲಿನ ಮೂರು ಜಿಲ್ಲೆಗಳ ಪ್ರೌಢಶಾಲೆಗಳಿಗೆ ಸಂಪನ್ಮೂಲ ಸಹಕಾರ, ಮಾರ್ಗದರ್ಶನ ಸಹಾಯಗಳನ್ನು ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನೀಡಲಾಗುತ್ತಿದೆ. ಬಿ.ಎಡ್. ತರಬೇತಿಗೆ ಪ್ರವೇಶ ನೀಡುವ ಪ್ರಕ್ರಿಯೆಯಲ್ಲಿ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ವ್ಯವಸ್ಥಾಪನಾ ಕೇಂದ್ರ (Nodal Centre) ವಾಗಿ ಕಾರ್ಯ ನಿರ್ವಹಿಸುತ್ತದೆ.

## 1.3 ಕಾಲೇಜಿನ ಸಿಬ್ಬಂದಿ ವರ್ಗ

ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರು ಸಹನಿರ್ದೇಶಕರ ದರ್ಜೆಯ ಹುದ್ದೆಯವರಾಗಿರುತ್ತಾರೆ. ಅಲ್ಲದೆ ಉಪನಿರ್ದೇಶಕರ ದರ್ಜೆಯ ಮೂರು ಜನ ಪ್ರವಾಚಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ದರ್ಜೆಯ ಹದಿಮೂರು ಜನ ಉಪನ್ಯಾಸಕರು ಇರುತ್ತಾರೆ. ಇದರ ಜೊತೆಗೆ ಒಬ್ಬ ಗ್ರಂಥಪಾಲಕರು, ಒಬ್ಬ ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಒಬ್ಬ ಕಲಾ ಬೋಧಕರು ಇರುತ್ತಾರೆ.

ಬೋಧಕೇತರ ವರ್ಗವು 3 ಪ್ರಥಮ ದರ್ಜೆ ಸಹಾಯಕರ ಹುದ್ದೆ, 2 ದ್ವಿತೀಯ ದರ್ಜೆ ಸಹಾಯಕರ ಹುದ್ದೆ, 2 ಬೆರಳಚ್ಚುಗಾರರ ಹುದ್ದೆ, 1 ಪ್ರಯೋಗ ಶಾಲೆಯ ಸಹಾಯಕರ ಹುದ್ದೆ, 1 ವಾಹನ ಚಾಲಕ ಹುದ್ದೆ ಮತ್ತು 8 ಗ್ರೂಪ್ 'ಡಿ' ಹುದ್ದೆಗಳನ್ನು ಒಳಗೊಂಡಿದೆ.

## 1.4 ಪ್ರಸ್ತುತ ವರ್ಷದಲ್ಲಿ ವಿದ್ಯಾರ್ಥಿಗಳ ಮತ್ತು ಸಿಬ್ಬಂಧಿ ವರ್ಗದವರ ಸಂಖ್ಯೆ

ಪ್ರಸ್ತುತ 2004-05 ನೇ ಸಾಲಿನಲ್ಲಿ ನಮ್ಮ ಸಿ.ಟಿ.ಇ ಯಲ್ಲಿ ಮೇಲೆ ಸೂಚಿಸಿರುವಂತೆ ಎಲ್ಲಾ ಹುದ್ದೆಗಳ ಭರ್ತಿಯಾಗಿದ್ದ ಕಲಾ ವಿಭಾಗ ಮತ್ತು ವಿಜ್ಞಾನ ವಿಭಾಗಗಳಿಂದ ಒಟ್ಟು 100 ಮಂದಿ ಪ್ರಶಿಕ್ಷಣಾರ್ಥಿಗಳಿದ್ದಾರೆ. ಇವರುಗಳು ಪದವಿಯ ಹಂತದಲ್ಲಿ ಅಧ್ಯಯನ ಮಾಡಿದ

ವಿಷಯಗಳ ಆಧಾರದ ಮೇಲೆ 8 ಬೋಧನಾ ವಿಷಯ ವಿಧಾನಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.

## 1.5 ಕಟ್ಟಡ

ನಮ್ಮ ಸಂಸ್ಥೆಯು ಸದ್ಯಕ್ಕೆ ಝಾನ್ಸಿ ಲಕ್ಷ್ಮೀಬಾಯಿ ರಸ್ತೆಯಲ್ಲಿರುವ ಮಹಾರಾಜ ಪದವಿ ಪೂರ್ವ ಕಾಲೇಜಿನ ಕಟ್ಟಡದ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಅನತಿ ದೂರದಲ್ಲಿರುವ ವಸಂತಮಹಲ್‌ನ ವಿಶಾಲ ಆವರಣದಲ್ಲಿ ಸಂಸ್ಥೆಯ ಭವ್ಯ ಕಟ್ಟಡಗಳು ನಿರ್ಮಾಣದ ಹಂತದಲ್ಲಿದ್ದು ಕಾಲೇಜು ಶೀಘ್ರದಲ್ಲಿಯೇ ಅಲ್ಲಿಗೆ ಸ್ಥಳಾಂತರಗೊಳ್ಳಲಿದೆ.

## 1.6 ಕೆಲಸದ ವೇಳೆ

ಕಾಲೇಜು ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 10.15 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಕೆಲಸ ಮಾಡುತ್ತದೆ. ಶನಿವಾರದ ಕೆಲಸದ ವೇಳೆ ಬೆಳಿಗ್ಗೆ 10.15 ರಿಂದ 1.20 ಗಂಟೆಯವರಿಗೆ.

## 1.7 ಸಂಸ್ಥೆಯಲ್ಲಿರುವ ಸೌಲಭ್ಯಗಳು

ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆಯನ್ನು ತರುವ ಘನ ಉದ್ದೇಶವನ್ನು ಹೊಂದಿರುವ ಸಂಸ್ಥೆಯು ಅಗತ್ಯ ಸೌಲಭ್ಯಗಳನ್ನು ಹೊಂದಿರುವುದು ಅವಶ್ಯಕ. ಸಂಸ್ಥೆಯು ಸುಸಜ್ಜಿತವಾದ ತರಗತಿ ಕೊಠಡಿಗಳನ್ನು ಹೊಂದಿದ್ದು, ಬೋಧನೆ ಪರಿಣಾಮಕಾರಿಯಾಗುವಂತೆ ಮಾಡಲು ಸಾಕಷ್ಟು ದೃಕ್ ಶ್ರವಣೋಪಕರಣಗಳು, ಗಣಕಯಂತ್ರಗಳು, ಲ್ಯಾಪ್-ಟಾಪ್, ಮುಂತಾದವುಗಳನ್ನು ಒಳಗೊಂಡಿದೆ ಸಂಸ್ಥೆಯು ಸಮೃದ್ಧ ಗ್ರಂಥಾಲಯವನ್ನು ಹೊಂದಿದ್ದು, ವಿಪುಲ ಪುಸ್ತಕಗಳಿವೆ. (18280) ಅಲ್ಲದೆ ವಿವಿಧ ಬಗೆಯ ವೃತ್ತ ಪತ್ರಿಕೆಗಳು, ವಾರಪತ್ರಿಕೆಗಳು, ಉದ್ಯೋಗ ಮಾರ್ಗದರ್ಶಿ ಪತ್ರಿಕೆ, ಮಾಸ ಪತ್ರಿಕೆಗಳು, ನಿಯತಕಾಲಿಕಗಳು ಮುಂತಾದವುಗಳನ್ನು ಒಳಗೊಂಡಿದೆ. ಸಂಸ್ಥೆಯು ಸುವ್ಯವಸ್ಥಿತವಾದ ಪ್ರಯೋಗಾಲಯವನ್ನು ಒಳಗೊಂಡಿದ್ದು ಪ್ರಶಿಕ್ಷಣಾರ್ಥಿಗಳಿಗೆ ಅಗತ್ಯ ಸೌಲಭ್ಯಗಳನ್ನು ಸಕಾಲದಲ್ಲಿ ಒದಗಿಸಲಾಗುತ್ತಿದೆ.

## 1.8 ಸಂಶೋಧಕರ ಬಗ್ಗೆ

ನಾನು ಈ ಕ್ರಿಯಾ ಸಂಶೋಧನೆಯನ್ನು ಕೈಗೊಂಡಿರುವ ಸಮಯದಲ್ಲಿ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ನನ್ನ ಪದವಿಯನ್ನು ಕಲಾ ವಿಭಾಗದಲ್ಲಿ 1988 ರಲ್ಲಿ ಪಡೆದಿರುತ್ತೇನೆ ನಂತರ 1989 ರಲ್ಲಿ ಬಿ.ಎಡ್. ಪದವಿಯನ್ನು ಪಡೆದು ಕರ್ನಾಟಕ ಲೋಕ ಸೇವಾ ಆಯೋಗವು ನಡೆಸಿದ ಕರ್ನಾಟಕ ಶಿಕ್ಷಣ ಸೇವೆ (K.E.S) ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ, 1994 ರ ಜನವರಿಯಲ್ಲಿ ಶಿಕ್ಷಣ ಇಲಾಖೆಯನ್ನು ಪ್ರವೇಶಿಸಿದ್ದೇನೆ.

## 1.9 ಸಿ.ಟಿ.ಇ ಯಲ್ಲಿ ಉಪನ್ಯಾಸಕಿಯಾಗಿ ಕಾರ್ಯ ನಿರ್ವಹಿಸುವುದಕ್ಕಿಂತ ಮುಂಚಿನ ಅನುಭವ

1994 ರ ಜನವರಿಯಲ್ಲಿ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಗೆಜೆಟೆಡ್ ಅಧಿಕಾರಿಯಾಗಿ ಆಯ್ಕೆಯಾದೆನು. ಈ ಸಮಯದಲ್ಲಿ ನನ್ನನ್ನು ಹಾಸನ ಜಿಲ್ಲೆಯ ಒಂದು ಗ್ರಾಮದಲ್ಲಿರುವ ಪ್ರೌಢಶಾಲೆಯ ಮುಖ್ಯ ಶಿಕ್ಷಕಿಯಾಗಿ ನೇಮಕ ಮಾಡಲಾಯಿತು. ಈ ಹುದ್ದೆಯು ಸಹಾಯಕ ಶಿಕ್ಷಣಾಧಿಕಾರಿ, ಉಪನಿರ್ದೇಶಕರ ಕಛೇರಿಯಲ್ಲಿರುವ ವಿಷಯ ಪರೀವೀಕ್ಷರ ಹುದ್ದೆಗೆ ಸಮಾನವಾದುದಾಗಿದೆ.

ನಾಲ್ಕು ವರ್ಷಗಳು ಗ್ರಾಮೀಣ ಪ್ರದೇಶದಲ್ಲಿ ಮುಖ್ಯ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿದ ನಂತರ 1998 ರಲ್ಲಿ ಬೆಂಗಳೂರು ನಗರದಲ್ಲಿರುವ ಒಂದು ಪ್ರೌಢಶಾಲೆಗೆ ನನ್ನನ್ನು ಮುಖ್ಯ ಶಿಕ್ಷಕಿಯನ್ನಾಗಿ ವರ್ಗಾವಣೆ ಮಾಡಲಾಯಿತು. ಅಲ್ಲಿ ಮೂರು ವರ್ಷಗಳ ಸೇವೆ ಸಲ್ಲಿಸಿದ ನಂತರ ಇಲಾಖಾ ಬಡ್ತಿಯ ಮೇರೆ ನನ್ನನ್ನು ಮೈಸೂರಿನ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿ ನೇಮಕ ಮಾಡಲಾಯಿತು. ಸದರಿ ಸಂಸ್ಥೆಯಲ್ಲಿ ಡಿಸೆಂಬರ್ 2000 ದಿಂದ ಉಪನ್ಯಾಸಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

## 1.10 ಸಿ.ಟಿ.ಇ ಯಲ್ಲಿ ಉಪನ್ಯಾಸಕಿಯಾಗಿ ಅನುಭವ

ಡಿಸೆಂಬರ್ 2000 ದಿಂದ ಇಂದಿನವರೆಗೆ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಈ ಅವಧಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಕೃಪೆಯಿಂದ ನನ್ನನ್ನು ಪ್ರದೇಶಿಕ ಶಿಕ್ಷಣ ಸಂಸ್ಥೆ ಮೈಸೂರು ಇಲ್ಲಿಗೆ ಶಿಕ್ಷಣ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ನಿಯೋಜಿಸಲಾಯಿತು. ಇಲಾಖೆ ಮತ್ತು ಹಿರಿಯ ಅಧಿಕಾರಿಗಳ ಸಹಕಾರದಿಂದ 2001-2002 ನೇ ಸಾಲಿನಲ್ಲಿ ಎಂ.ಎಡ್ ಕೋರ್ಸ್ ಅನ್ನು ಯಶಸ್ವಿಯಾಗಿ ಮುಗಿಸಲಾಯಿತು. ಹೀಗೆ ಪಡೆದ ಎಂ.ಎಡ್ ಪದವಿಯಿಂದ ಬಿ.ಎಡ್ ವಿದ್ಯಾರ್ಥಿಗಳಿಗೆ ಪಾಠ ಬೋಧನೆ ಮಾಡಲು ಅಗತ್ಯವಾದ ಕೌಶಲ್ಯ ಮತ್ತು ಜ್ಞಾನವನ್ನು ಗಳಿಸಲು ಸಹಕಾರಿಯಾಯಿತು.

## 1.11 ಕರ್ತವ್ಯ ಮತ್ತು ಜವಾಬ್ದಾರಿಗಳು

ಸಿ.ಟಿ.ಇ ಯಲ್ಲಿ ಉಪನ್ಯಾಸಕಿಯಾಗಿ ಕೆಳಕಂಡ ಕರ್ತವ್ಯಗಳು ಮತ್ತು ಜವಾಬ್ದಾರಿಗಳಿರುತ್ತವೆ.

1. ಪ್ರಶಿಕ್ಷಣಾರ್ಥಿಗಳಿಗೆ ಪಾಠಬೋಧನೆ, ನಿಯೋಜಿತ ಕಾರ್ಯಗಳನ್ನು ನೀಡುವುದು ಮತ್ತು ಮೌಲ್ಯಮಾಪನ ಮಾಡುವುದು.

2. ಪ್ರಶಿಕ್ಷಣಾರ್ಥಿಗಳ ಬೋಧನಾಭ್ಯಾಸದ ಅವಧಿಯಲ್ಲಿ ಶಾಲೆಗಳಿಗೆ ಭೇಟಿ ನೀಡಿ ಮಾರ್ಗದರ್ಶನ ಮಾಡುವುದು.

3. 10ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಶೇ.40 ಕ್ಕಿಂತ ಕಡಿಮೆ ಫಲಿತಾಂಶ ಬಂದಿರುವ ಶಾಲೆಗಳಿಗೆ ಭೇಟಿ ನೀಡಿ ಫಲಿತಾಂಶ ಉತ್ತಮ ಪಡಿಸಲು ಮಾರ್ಗದರ್ಶನ ಮಾಡುವುದು.

4. ಸೇವಾಂತರ್ಗತ ತರಬೇತಿಗಳನ್ನು ಸಂಯೋಜಿಸುವುದು, ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸುವುದು.

5. ಕಾಲಕಾಲಕ್ಕೆ ಇಲಾಖೆ ಮತ್ತು ಮೇಲಾಧಿಕಾರಿಗಳು ನಿಯೋಜಿಸುವ ಕೆಲಸಗಳನ್ನು ನಿರ್ವಹಿಸುವುದು ಮತ್ತು ತರಬೇತಿಗಳಿಗೆ ಹಾಜರಾಗುವುದು.

# ಅಧ್ಯಾಯ – II

# ಕಾಳಜಿ

# ಅಧ್ಯಾಯ II – ಕಾಳಜಿ

## 2.1 ಅಸಮಾಧಾನ ಪರಿಸ್ಥಿತಿ

'ಉದಯೋನ್ಮುಖ ಭಾರತದಲ್ಲಿ ಶಿಕ್ಷಣ" ವಿಷಯ ಬೋಧನೆಯಲ್ಲಿ ನೂರು ಜನ (100) ವಿದ್ಯಾರ್ಥಿಗಳಿದ್ದು ಎಲ್ಲಾ ವಿದ್ಯಾರ್ಥಿಗಳು ಕಲಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೋಳ್ಳದಿರುವುದು ಅಸಮಾಧಾನ ಸಂಗತಿಯಾಗಿದೆ.

ಶಿಕ್ಷಣವು ಒಂದು ದ್ವಿಮುಖ ಪ್ರತಿಕ್ರಿಯೆಯಾಗಿದ್ದು ಇವರಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಸಕ್ರಿಯವಾಗಿ ಭಾಗವಹಿಸಿದರೆ ಮಾತ್ರ ಬೋಧನೆಯ ಉದ್ದೇಶ ಈಡೇರುತ್ತದೆ. ಆದರೆ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಳ್ಳದಿರುವುದು ಅತೃಪ್ತಿಕರವಾದ ಸಂಗತಿಯಾಗಿದೆ.

ವಿದ್ಯಾರ್ಥಿಗಳು ಕಲಿಕೆಯ ಚಟುವಟಿಕೆಯಲ್ಲಿ ತಾವೇ ಮುಂದೆ ಬಂದು ಭಾಗವಹಿಸುತ್ತಿಲ್ಲ. ಅಲ್ಲದೆ ಶಿಕ್ಷಕರು ಪಾಠದ ಮಧ್ಯೆ ಕೇಳುವ ಯಾವುದೇ ಪ್ರಶ್ನೆಗಳಿಗೆ ಪ್ರತಿಕಯಿಸುತ್ತಿಲ್ಲ. ಉಪನ್ಯಾಸಕರು ನಿಯೋಜಿಸಿದ ಯಾವುದೇ ಕಾರ್ಯಗಳನ್ನು ದಕ್ಷತೆಯಿಂದ ಮಾಡದಿರುವುದು ಸ್ವಾಗತಾರ್ಹವಾದ ಬೆಳವಣಿಗೆಯಲ್ಲ.

## 2.2 ಅಸಮಾಧಾನ ಪರಿಸ್ಥಿತಿಯ ವಿಶ್ಲೇಷಣೆ

ವಿದ್ಯಾರ್ಥಿಗಳಿಗೆ ಶೈಕ್ಷಣಿಕ ತತ್ವಜ್ಞಾನ, ಶೈಕ್ಷಣಿಕ ಸಮಾಜ ಶಾಸ್ತ್ರ ಮತ್ತು ಪ್ರಸ್ತುತ ಭಾರತದಲ್ಲಿ, ಶೈಕ್ಷಣಿಕ ಬೆಳವಣಿಗೆ ಮತ್ತು ಸಮಸ್ಯೆಗಳನ್ನು ಒಳಗೊಂಡಿರುವ ವಿಷಯವೇ ಉದಯೋನ್ಮುಖ ಭಾರತದಲ್ಲಿ ಶಿಕ್ಷಣ (Education in Emerging India) ಈ ವಿಷಯವು ಎಲ್ಲಾ ಶೈಕ್ಷಣಿಕ ವಿಷಯಗಳಿಗೆ ಬುನಾದಿಯಾಗಿದ್ದು, ಈ ವಿಷಯವನ್ನು ಪ್ರಶಿಕ್ಷಣಾರ್ಥಿಗಳು ತಿಳಿಯಬೇಕಾಗಿರುವುದು ಬಹಳ ಮುಖ್ಯ ಮತ್ತು ಅನಿವಾರ್ಯವಾಗಿರುವುದರಿಂದ ವಿದ್ಯಾರ್ಥಿಗಳ ಆಸಕ್ತಿಯಿಂದ ಕಲಿಕೆಯಲ್ಲಿ ಭಾಗವಹಿಸಬೇಕಾಗಿದೆ ಅಲ್ಲದೆ ಪ್ರಸ್ತುತ ವಿಷಯದಲ್ಲಿ ಪರೀಕ್ಷೆಯಲ್ಲಿ ನೂರು ಅಂಕಗಳಿಗೆ ವಿದ್ಯಾರ್ಥಿ ಉತ್ತರಿಸಬೇಕಾಗಿರುವುದರಿಂದ ಕಲಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸದಿರುವುದು ಅಪೇಕ್ಷಣಿಯ ಬೆಳವಣಿಗೆಯಾಗಿರುವುದಿಲ್ಲ.

## 2.3 ಸಂಭವನೀಯ ಕಾರಣಗಳು

**ಬೋಧನಾ-ಕಲಿಕೆ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಳ್ಳದಿರಲು ಕೆಳಕಂಡ ಕಾರಣಗಳನ್ನು ಊಹಿಸಲಾಗಿದೆ.**

1. ಶಿಕ್ಷಕರು ಸಾಕಷ್ಟು ಪೂರ್ವಸಿದ್ಧತೆಯನ್ನು ಮಾಡಿಕೊಂಡು ವಿಷಯ ಬೋಧನೆಯನ್ನು ಮಾಡದಿರುವುದು.
2. ಶಿಕ್ಷಕರು ತರಗತಿಯಲ್ಲಿ ಪರಿಣಾಮಕಾರಿಯಾಗಿ ಬೋಧನೆ ಮಾಡದಿರುವುದು.
3. ವಿದ್ಯಾರ್ಥಿಗಳನ್ನು ಕಲಿಕೆಯ ಕಡೆಗೆ ಪ್ರೇರೇಪಿಸುವಲ್ಲಿ ಶಿಕ್ಷಕರು ವಿಫಲರಾಗಿರುವುದು.
4. ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸುವಲ್ಲಿ ಶಿಕ್ಷಕರು ವಿಫಲರಾಗಿರುವುದು.
5. ಬೋಧನೆಯು ಏಕಮುಖವಾಗಿರುವುದು ಮತ್ತು ನೀರಸವಾಗಿರುವುದು.
6. ಶೇ.20 ರಷ್ಟು ವಿದ್ಯಾರ್ಥಿಗಳು ಆಂಗ್ಲ ಮಾಧ್ಯಮದವರಾಗಿದ್ದು ಶಿಕ್ಷಕರು ಸಾಕಷ್ಟು ಆಂಗ್ಲ ಭಾಷೆಯನ್ನು ಬಳಸದಿರುವುದು.
7. ಶಿಕ್ಷಕರು ಒಂದೇ ಕಡೆ ನಿಂತು, ಚಲನವಲನವಿಲ್ಲದೆ ಬೋಧಿಸುವುದು.
8. ವಿದ್ಯಾರ್ಥಿಗಳ ಗಮನ ಸೆಳೆಯುವಂತೆ ಆಕರ್ಷಣೀಯವಾಗಿ ಬೋಧಿಸದಿರುವುದು.
9. ಬೋಧನೆಯ ನಡುವೆ ಆಗಾಗ್ಗೆ ಪ್ರಶ್ನೆ ಕೇಳಿ ವಿದ್ಯಾರ್ಥಿಗಳನ್ನು ಪಾಠದ ಕಡೆ ಜಾಗ್ರತೆಯಿಂದ ಇರುವಂತೆ ಮಾಡದಿರುವುದು.
10. ಬೋಧನೆಯನ್ನು ಸಾಕಷ್ಟು ನಿಧಾನವಾಗಿ ಮಾಡದಿರುವುದು.
11. ವಿದ್ಯಾರ್ಥಿಗಳ ಅಶಿಸ್ತಿನ ವರ್ತನೆ.
12. ವಿದ್ಯಾರ್ಥಿಗಳ ಬೇಜವಾಬ್ದಾರಿ ವರ್ತನೆ.

## 2.4 ಸೈದ್ಧಾಂತಿಕ ನೆಲೆಗಟ್ಟು

ಮೊದಲನೆಯದಾಗಿ ನನ್ನ ಬೋಧನೆ ಪರಿಣಾಮಕಾರಿಯಾಗಿಲ್ಲದಿರುವುದಕ್ಕೆ ಕಾರಣ ನಾನು ವಿದ್ಯಾರ್ಥಿಗಳನ್ನು ಕಲಿಕೆಯ ದಿಕ್ಕಿನತ್ತ ಪ್ರೇರೇಪಿಸುವಲ್ಲಿ ಪ್ರಾಯಶಃ ಅಸಮರ್ಥಳಾಗಿರುಬಹುದು.

ಈ ಅಸಮರ್ಥತೆಗೆ ಸಂಬಂಧಪಟ್ಟ ವಿಷಯದಲ್ಲಿ ನನಗಿರುವ ಅಪ್ರಭುತ್ವ ಕಾರಣವಿರಬಹುದು. ಬೋಧನೆಗೆ ಮುಂಚೆ ಸಾಕಷ್ಟು ಪೂರ್ವ ಸಿದ್ಧತೆಯ ಅಗತ್ಯವಿರಬಹುದು. ನನಗೆ ಗೊತ್ತಿರುವ ವಿಷಯವನ್ನು ಪ್ರಶಿಕ್ಷಣಾರ್ಥಿಗಳಿಗೆ ತಲುಪಿಸುವಲ್ಲಿ ಪ್ರಾಯಶಃ ವಿಫಲಳಾಗಿರಬಹುದು. ಈ ವಿಫಲತೆಗೆ ಬೋಧನಾ ಕೌಶಲ್ಯದಲ್ಲಿ ನನಗೆ ಪರಿಣಿತಿ ಇಲ್ಲದಿರಬಹುದು. ಈ ಕಾರಣಗಳಿಂದ ವಿದ್ಯಾರ್ಥಿಗಳಿಗೆ ಬೋಧನೆ-ಕಲಿಕೆಯಲ್ಲಿ ಆಸಕ್ತಿಯಾಗಲಿ ಕುತೂಹಲವಾಗಲಿ ಇಲ್ಲದಿರಬಹುದು. ಈ ನಿರಾಸಕ್ತಿಗೆ ನನ್ನ ಬೋಧನೆ ಆಕರ್ಷಣೀಯವಾಗಿಲ್ಲದಿರುವುದು ಭಾಗಶಃ ಕಾರಣವಿರಬಹುದು. ಪರೋಕ್ಷವಾಗಿ ಇದು ವಿದ್ಯಾರ್ಥಿಗಳು ಅಶಿಸ್ತಿನಿಂದ ವರ್ತಿಸಲು ಕಾರಣವಾಗಿರಬಹುದು. ಇದು ಕಲಿಕೆಯಲ್ಲಿ ಅಪೇಕ್ಷಿತಮಟ್ಟ ತಲುಪದಿರಲು ಕಾರಣವಾಗಿರಬಹುದು.

ಎರಡನೆಯದಾಗಿ ವಿದ್ಯಾರ್ಥಿಗಳ ಬೇಜವಾಬ್ದಾರಿ ವರ್ತನೆ, ಕಲಿಕೆಯಲ್ಲಿ ನಿರಾಸಕ್ತಿ, ವಿದ್ಯಾರ್ಥಿಗಳ ವೈಯುಕ್ತಿಕ ಸಮಸ್ಯೆಗಳು, ಕಲಿಕೆಯಲ್ಲಿ ಅವರಿಗಿರುವ ಋಣಾತ್ಮಕ ಮನೋಭಾವ ಕಲಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳದಿರುವುದಕ್ಕೆ ಕಾರಣವಾಗಿ ಕಲಿಕೆಯಲ್ಲಿ ನಿರೀಕ್ಷಿತ ಮಟ್ಟ ತಲುಪದಿರಲು ಕಾರಣವಾಗಿವೆ.

## 2.5 ಸೈದ್ಧಾಂತಿಕ ನೆಲೆಗಟ್ಟುಗಳ ಪ್ರಾಥಮೀಕರಣ

ತರಗತಿಯ ಎಲ್ಲಾ ವಿದ್ಯಾರ್ಥಿಗಳು ಸಕ್ರಿಯವಾಗಿ ಕಲಿಕೆಯಲ್ಲಿ ಪಾಲ್ಗೊಳ್ಳದಿರುವುದಕ್ಕೆ ನನ್ನ ಅಸಮರ್ಪಕ ಬೋಧನೆಯು ಕಾರಣವಾಗಿದ್ದು, ಇದು ವಿದ್ಯಾರ್ಥಿಗಳಲ್ಲಿ ಅನಾಸಕ್ತಿಯನ್ನು ಉಂಟುಮಾಡಿದ್ದು ತರಗತಿಯ ನಿರ್ವಹಣಾ ಕೌಶಲ್ಯವನ್ನು ಸಮರ್ಪಕವಾಗಿ ಬಳಸಿಕೊಳ್ಳುವುದರಿಂದ ಮತ್ತು ಅನ್ಯೋನ್ಯ ಕ್ರಿಯಾ, ಪ್ರಕ್ರಿಯೆಯಿಂದ ವಿದ್ಯಾರ್ಥಿಗಳು ಕಲಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಬಹುದು. ಆದುದರಿಂದ ಮೊದಲನೆಯ ಪ್ರಸ್ತಾಪವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

## 2.6 ಕ್ರಿಯಾ ಪ್ರಾಕಲ್ಪನೆ

**"ಶಿಕ್ಷಕರ ಮತ್ತು ವಿದ್ಯಾರ್ಥಿಗಳ ನಡುವಿನ ಅನ್ಯೋನ್ಯ-ಕ್ರಿಯಾ ಪ್ರಕ್ರಿಯೆಯು ಬೋಧನಾ-ಕಲಿಕೆಯಲ್ಲಿ ವಿದ್ಯಾರ್ಥಿಗಳನ್ನು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುತ್ತದೆ".**

# ಅಧ್ಯಾಯ – III

## ಮಧ್ಯವರ್ತನಾ ಚಟುವಟಿಕೆಗಳ ಯೋಜನೆ ಮತ್ತು ಅನುಷ್ಠಾನ

# ಅಧ್ಯಾಯ III – ಮಧ್ಯವರ್ತನಾ ಚಟುವಟಿಕೆಯ ಯೋಜನೆ ಮತ್ತು ಅನುಷ್ಠಾನ

## 3.1 ಕಾರ್ಯಭಾಗಿ ಗುಂಪು

ಈ ಕ್ರಿಯಾ ಸಂಶೋಧನೆಯು 2004–05 ನೇ ಸಾಲಿನಲ್ಲಿ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ಮೈಸೂರು ಇಲ್ಲಿ ಬಿ.ಎಡ್ ತರಬೇತಿಯನ್ನು ಪಡೆಯುತ್ತಿರುವ ಪ್ರಶಿಕ್ಷಣಾರ್ಥಿಗಳನ್ನು ಒಳಗೊಂಡಿದ್ದು ಇವರ ಸಂಖ್ಯೆ 100 ಆಗಿದೆ.

## 3.2 ಕಾರ್ಯಪಟ್ಟಿ

| ಕ್ರ ಸಂ | ಕಾರ್ಯ | ಕಾರ್ಯಭಾಗಿ ವ್ಯಕ್ತಿಗಳು | ಸ್ಥಳ | ಕಾರ್ಯದ ಅವಧಿ | ಷರಾ |
|---|---|---|---|---|---|
| 1 | ಉಪನ್ಯಾಸ ವಿಧಾನದ ಜೊತೆಗೆ ಬೋಧನೆಯಲ್ಲಿ ಪ್ರಶ್ನೋತ್ತರ ವಿಧಾನವನ್ನು ಅಳವಡಿಸಿಕೊಂಡಿದ್ದರಿಂದ | 100 ಜನ ಪ್ರಶಿಕ್ಷಣಾರ್ಥಿಗಳು | ಸಿ.ಟಿ.ಇ, ಮೈಸೂರು | 4 ಅವಧಿಗಳು | ಪ್ರಶ್ನೋತ್ತರ ವಿಧಾನದ ಬಳಕೆಯಿಂದ ಪಾಲ್ಗೊಳ್ಳುವಿಕೆಯು ಶೇ.79 ಆಗಿದೆ. |
| 2 | ಉಪನ್ಯಾಸ ವಿಧಾನದ ಜೊತೆಗೆ ಚರ್ಚಾ ವಿಧಾನವನ್ನು ಅಳವಡಿಸಿಕೊಂಡಿದ್ದರಿಂದ | 100 ಜನ ಪ್ರಶಿಕ್ಷಣಾರ್ಥಿಗಳು | ಸಿ.ಟಿ.ಇ ಮೈಸೂರು | 3 ಅವಧಿಗಳು | ಚರ್ಚಾ ವಿಧಾನದಿಂದ ಪಾಲ್ಗೊಳ್ಳುವಿಕೆಯು ಶೇ.86 ರಷ್ಟಾಗಿದೆ. |
| 3 | ಉಪನ್ಯಾಸ ವಿಧಾನದ ಜೊತೆಗೆ ಸೆಮಿನಾರ್ ವಿಧಾನದಿಂದ | 100 ಜನ ಪ್ರಶಿಕ್ಷಣಾರ್ಥಿಗಳು | ಸಿ.ಟಿ.ಇ ಮೈಸೂರು | 3 ಅವಧಿಗಳು | ಸೆಮಿನಾರ್ ವಿಧಾನದಿಂದ ಪಾಲ್ಗೊಳ್ಳುವಿಕೆಯು ಶೇ.91 ರಷ್ಟಾಗಿದೆ. |
| 4 | ಆಸನ ವ್ಯವಸ್ಥೆಯ ಬದಲಾವಣೆಯಿಂದ | 100 ಜನ ಪ್ರಶಿಕ್ಷಣಾರ್ಥಿಗಳು | ಸಿ.ಟಿ.ಇ ಮೈಸೂರು | ಮುಂದುವರಿದಿದೆ | ಆಸನ ವ್ಯವಸ್ಥೆಯ ಬದಲಾವಣೆಯಿಂದ ಪಾಲ್ಗೊಳ್ಳುವಿಕೆಯು ಶೇ.94 ರಷ್ಟಾಗಿದೆ. |

## 3.3 ಅನುಷ್ಠಾನ

ಉದಯೋನ್ಮುಖ ಭಾರತದಲ್ಲಿ ಶಿಕ್ಷಣ ವಿಷಯ ಬೋಧನೆಯಲ್ಲಿ 100 ಜನ ಪ್ರಶಿಕ್ಷಣಾರ್ಥಿಗಳಿದ್ದು ಶೇ.70 ಮಂದಿ ಮಾತ್ರ ಬೋಧನಾ ಕಲಿಕೆ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದು ಉಳಿದ ಶೇ.30 ರಷ್ಟು ಪ್ರಶಿಕ್ಷಣಾರ್ಥಿಗಳು ಸಕ್ರಿಯವಾಗಿ ಭಾಗವಹಿಸುತ್ತಿಲ್ಲ. ಈ 30 ಮಂದಿ ಪ್ರಶಿಕ್ಷಣಾರ್ಥಿಗಳನ್ನು ಕಲಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲು ಕೆಳಕಂಡ ಬೋಧನಾ-ಕಲಿಕಾ ಚಟುವಟಿಕೆಗಳನ್ನು ಬೋಧನೆಯಲ್ಲಿ ಅಳವಡಿಸಿಕೊಳ್ಳಲಾಯಿತು.

ಉಪನ್ಯಾಸ ವಿಧಾನದ ಜೊತೆಗೆ ಪ್ರಶ್ನೋತ್ತರ ವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಉಪನ್ಯಾಸದ ಮಧ್ಯೆ ಆಗಾಗ್ಗೆ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಲಾಯಿತು. ಬೋಧನಾ ಕಲಿಕೆ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು, ಪ್ರಶಿಕ್ಷಣಾರ್ಥಿಗಳನ್ನು ಕಲಿಕೆಯತ್ತ ಪ್ರೇರೇಪಿಸಲು ರ‍್ಯಾಂಡಮ್ ಆಗಿ ಪ್ರಶ್ನೆ ಕೇಳಲಾಯಿತಾದರೂ ಪರೋಕ್ಷವಾಗಿ ಪ್ರಶಿಕ್ಷಣಾರ್ಥಿಗಳಿಗೆ ಗೊತ್ತಿಲ್ಲದಂತೆ ಬೋಧನಾ ಕಲಿಕೆ ಚಟುವಟಿಕೆಯಲ್ಲಿ ಸ್ವಾಯವಾಗಿ ಪಾಲ್ಗೊಳ್ಳದ ಶೇ.30 ರಷ್ಟು ವಿದ್ಯಾರ್ಥಿಗಳನ್ನೇ ಪ್ರಶ್ನಿಸಲಾಯಿತು. ಈ ಚಟುವಟಿಕೆಯನ್ನು ಮೊದಲ ದಿನ ಅಳವಡಿಸಿಕೊಂಡಾಗ 2 ಜನ ಪ್ರಶಿಕ್ಷಣಾರ್ಥಿಗಳು ಬೋಧನಾ-ಕಲಿಕೆ ಚಟುವಟಿಕೆಯಲ್ಲಿ ಆಸಕ್ತಿಯನ್ನು ವ್ಯಕ್ತಪಡಿಸಿದರು.

ಇದೇ ತಂತ್ರವನ್ನು 2ನೆಯ ದಿನ ಮುಂದುವರಿಸಿದಾಗ 3 ಮಂದಿ, 3ನೇ ದಿನ 4 ಮಂದಿ ಸಕ್ರಿಯವಾಗಿ ಪಾಲ್ಗೊಂಡರು. ಇದೇ ತಂತ್ರವನ್ನು 4ನೆಯ ದಿನವೂ ಮುಂದುವರಿಸಿದಾಗ ಪಾಲ್ಗೊಳ್ಳುವವರ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬರಲಿಲ್ಲ. ಆದ್ದರಿಂದ ಈ ಪ್ರಶ್ನೋತ್ತರ ವಿಧಾನದ ಜೊತೆಗೆ ಬೇರೆ ತಂತ್ರವನ್ನು ಬಳಸಲು ನಿರ್ಧರಿಸಲಾಯಿತು.

ಪ್ರಶ್ನೋತ್ತರ ವಿಧಾನದಿಂದ ಒಟ್ಟು 9 ಮಂದಿ ಮಾತ್ರ ಬೋಧನಾ-ಕಲಿಕೆ ಚಟುವಟಿಕೆಯಲ್ಲಿ ಭಾಗವಹಿಸಿದರು. ಉಳಿದ 21 ಪ್ರಶಿಕ್ಷಣಾರ್ಥಿಗಳನ್ನು ಕಲಿಕೆಯಲ್ಲಿ ಭಾಗವಹಿಸುವಂತೆ ಮಾಡಲು ಬೋಧನೆಯಲ್ಲಿ ಚರ್ಚಾವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಈ ವಿಧಾನವನ್ನು ಉಪನ್ಯಾಸ ವಿಧಾನದ ಜೊತೆ ಜೊತೆಗೆ ಬಳಸಲಾಯಿತು. ಈ ತಂತ್ರವನ್ನು ಅಳವಡಿಸಿಕೊಂಡಿದ್ದರಿಂದ ವಿದ್ಯಾರ್ಥಿಗಳು ಚಿಂತಿಸುವ ಕೌಶಲವನ್ನು ಸದುಪಯೋಗ

ಮಾಡಿಕೊಂಡು ತಮ್ಮ ಯೋಚನಾಲಹರಿಯನ್ನು ಚರ್ಚೆಯಲ್ಲಿ ವ್ಯಕ್ತಪಡಿಸಲು ಸಹಕಾರಿಯಾಯಿತು. ಪ್ರಶಿಕ್ಷಣಾರ್ಥಿಗಳನ್ನು 10 ಜನರ 10 ಗುಂಪುಗಳನ್ನಾಗಿ ಮಾಡಲಾಯಿತು. ಪ್ರತಿಯೊಂದು ಗುಂಪಿನಲ್ಲಿಯೂ ಒಬ್ಬ ನಾಯಕ ಮತ್ತು ಉಪನಾಯಕನನ್ನು ಆಯ್ಕೆ ಮಾಡಲಾಯಿತು. ಹೀಗೆ ಆಯ್ಕೆ ಮಾಡಲ್ಪಟ್ಟ ನಾಯಕ ಮತ್ತು ಉಪನಾಯಕರು ಬೋಧನಾ ಕಲಿಕೆ ಚಟುವಟಿಕೆಯಲ್ಲಿ ಅನಾಸಕ್ತಿಯನ್ನು ಹೊಂದಿದವರೇ ಆಗಿದ್ದರು. ಗುಂಪಿನ ಸದಸ್ಯರ ವಿಚಾರಗಳನ್ನು ಕ್ರೋಢೀಕರಿಸಿ ಮಂಡಿಸುವ ಜವಾಬ್ದಾರಿ ಕೂಡ ನಾಯಕ ಅಥವಾ ಉಪನಾಯಕರದ್ದೇ ಆಗಿರುವಂತೆ ನೋಡಿಕೊಳ್ಳಲಾಯಿತು. ಚರ್ಚೆಯಲ್ಲಿ ಭಾಗವಹಿಸಿ ಕಡ್ಡಾಯವಾಗಿ ವಿಷಯ ಮಂಡನೆ ಮಾಡಬೇಕಾಗಿದ್ದುದರಿಂದ ಬೋಧನಾ-ಕಲಿಕೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವವರ ಸಂಖ್ಯೆ ಹೆಚ್ಚಾಯಿತು.

ಈ ಬೋಧನಾ ತಂತ್ರವನ್ನು ಮೊದಲನೆಯ ದಿನ ಬಳಸಿದಾಗ 4 ಜನ ಅನಾಸಕ್ತ ಪ್ರಶಿಕ್ಷಣಾರ್ಥಿಗಳು ಚರ್ಚೆ ಮತ್ತು ವಿಷಯ ಮಂಡನೆಯಲ್ಲಿ ಪಾಲ್ಗೊಂಡರು. ಇದೇ ವಿಧಾನವನ್ನು 2ನೆಯ ದಿನ ಅಳವಡಿಸಿಕೊಂಡಾಗ 3 ಮಂದಿ, ಬೋಧನೆಯಲ್ಲಿ ಆಸಕ್ತಿಯಿಂದ ಭಾಗವಹಿಸಿದರು. ಆದರೆ ಮೂರನೆಯ ದಿನ ಈ ವಿಧಾನದಿಂದ ಪಾಲ್ಗೊಳ್ಳುವಿಕೆಯ ಸಂಖ್ಯೆಯಲ್ಲಿ ಯಾವುದೇ ಬದಲಾವಣೆ ಕಂಡುಬರಲಿಲ್ಲ. ಒಟ್ಟು ಚರ್ಚಾ ವಿಧಾನವನ್ನು ಬೋಧನೆಯಲ್ಲಿ ಅಳವಡಿಸಿಕೊಂಡಿದ್ದರಿಂದ ಬೋಧನಾ ಕಲಿಕೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವವರ ಸಂಖ್ಯೆ 16 ಕ್ಕೆ ಏರಿತು. ಇನ್ನೂ 14 ಮಂದಿ ಬೋಧನಾ-ಕಲಿಕೆ ಚಟುವಟಿಕೆಯಲ್ಲಿ ಅನಾಸಕ್ತಿಯನ್ನು ಹೊಂದಿದ್ದರು.

ಬೋಧನಾ ಕಲಿಕಾ ಚಟುವಟಿಕೆಯಲ್ಲಿ ಇನ್ನೂ ಅನಾಸಕ್ತಿಯನ್ನು ಹೊಂದಿದ್ದ 14 ಮಂದಿ ಪ್ರಶಿಕ್ಷಣಾರ್ಥಿಗಳನ್ನು ಕಲಿಕೆಯತ್ತ ಪ್ರೇರೇಪಿಸಲು ಸೆಮಿನಾರ್‌ಗಳನ್ನು (ವಿಚಾರ ಸಂಕೀರ್ಣ) ಮಾಡುವ ತಂತ್ರವನ್ನು ಬಳಸಿಕೊಳ್ಳಲಾಯಿತು. ಈ ಸೆಮಿನಾರ್ ವಿಧಾನದಲ್ಲಿ ಉಪನ್ಯಾಸಕರು ಹಿಂದಿನ ತರಗತಿಯಲ್ಲಿ ಬೋಧಿಸಿದ ವಿಷಯವನ್ನು ಮುಂದಿನ ತರಗತಿಯಲ್ಲಿ ವಿದ್ಯಾರ್ಥಿಗಳು ಸಾರಾಂಶರೂಪವಾಗಿ ಮಂಡಿಸುವ ಚಟುವಟಿಕೆಯಾಗಿದ್ದು, ಹಿಂದಿನ ತರಗತಿಯಲ್ಲಿ ಆಸಕ್ತಿಯಿಂದ ಬೋಧನೆಯತ್ತ ಗಮನ ಹರಿಸಿದರೆ ಮಾತ್ರ ಮುಂದಿನ ತರಗತಿಯಲ್ಲಿ ಸೆಮಿನಾರ್ ಮಾಡಲು ಸಾಧ್ಯವಾಗುತ್ತಿತ್ತು. ಆದ್ದರಿಂದ ಪ್ರಶಿಕ್ಷನಾರ್ಥಿಗಳ ಪಾಲ್ಗೊಳ್ಳುವಿಕೆಯ ಮಟ್ಟ ಹೆಚ್ಚಾಯಿತು.

ಈ ಸೆಮಿನಾರ್ ತಂತ್ರವನ್ನು ಮೊದಲನೆಯ ದಿನ ಬಳಸಿದಾಗ ಪಾಲ್ಗೊಳುವಿಕೆಯ ಸಂಖ್ಯೆ 2ಕ್ಕೆ ಏರಿತು. ಎರಡನೆಯ ದಿನ ಇದು 3ಕ್ಕೆ ಏರಿತು. 3ನೆಯ ದಿನ ಪಾಲ್ಗೊಳ್ಳುವಿಕೆಯಲ್ಲಿ ಯಾವುದೇ ರೀತಿಯ ಬದಲಾವಣೆ ಇರಲಿಲ್ಲ.

ಮೇಲಿನ ಎಲ್ಲಾ ವಿಧಾನಗಳಿಂದ ತರಗತಿಯಲ್ಲಿ ಬೋಧನಾ ಕಲಿಕೆ ಚಟುವಟಿಕೆಯಲ್ಲಿ ಅನಾಸಕ್ತಿಯನ್ನು ಹೊಂದಿದ್ದ ಒಟ್ಟು 30 (ಶೇ.30) ಜನರಲ್ಲಿ 21 ಜನ ಪ್ರಶಿಕ್ಷಣಾರ್ಥಿಗಳು ಕಲಿಕೆಯತ್ತ ಆಸಕ್ತಿ ವಹಿಸಿರುವುದು ಕಂಡು ಬರುತ್ತದೆ.

ಉಳಿದ 9 ಜನ ಪ್ರಶಿಕ್ಷಣಾರ್ಥಿಗಳನ್ನು ಬೋಧನಾ–ಕಲಿಕೆ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿದ್ಯಾರ್ಥಿಗಳ ಆಸನ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ಮಾಡಲಾಗಿದ್ದು ಈ ಬದಲಾವಣೆಯಿಂದ 3 ವಿದ್ಯಾರ್ಥಿಗಳು ಕಲಿಕೆಯತ್ತ ಗಮನಹರಿಸಿದ್ದಾರೆ.

ಇನ್ನೂ 6 ಜನ ಪ್ರಶಿಕ್ಷಣಾರ್ಥಿಗಳು ತರಗತಿಯಲ್ಲಿ ನಿರಾಸಕ್ತಿಯಿಂದ ಕುಳಿತಿದ್ದು ಬೋಧನಾ–ಕಲಿಕೆ ಪ್ರಕ್ರಿಯೆಯ ಯಾವುದೇ ಚಟುವಟಿಕೆಯಲ್ಲಿ ಭಾಗವಹಿಸದಿರುವುದು ಕಂಡುಬಂದಿದೆ.

## 3.4 ಮಾಹಿತಿ ವಿಶ್ಲೇಷಣೆ


ಉಪನ್ಯಾಸ ವಿಧಾನದ ಜೊತೆಗೆ ಇತರ ಬೋಧನಾ ತಂತ್ರಗಳನ್ನು ಅಳವಡಿಸಿದಾಗ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯ ಸಂಖ್ಯೆಯಲ್ಲಿ ಹೆಚ್ಚಳವನ್ನು ತೋರಿಸುವ ಪಟ್ಟಿ

### ಪಟ್ಟಿ – 1

| ಕ್ರಮ ಸಂಖ್ಯೆ | ಬೋಧನಾ ವಿಧಾನ | ಪಾಲ್ಗೊಳ್ಳುವಿಕೆಯ ಸಂಖ್ಯೆ |
|---|---|---|
| 1 | ಪ್ರಶ್ನೋತ್ತರ ವಿಧಾನ | 09 |
| 2 | ಚರ್ಚಾ ವಿಧಾನ | 07 |
| 3 | ಸೆಮಿನಾರ್ ವಿಧಾನ | 05 |
| 4. | ಆಸನ ವ್ಯವಸ್ಥೆಯ ಬದಲಾವಣೆ | 03 |
| **ಒಟ್ಟು** | | **24** |

ಮೇಲಿನ ಪಟ್ಟಿಯನ್ನು ವಿಶ್ಲೇಷಿಸಿದಾಗ ಬೋಧನಾ-ಕಲಿಕೆ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳದ ಪ್ರಶಿಕ್ಷಣಾರ್ಥಿಗಳು 30 ಇದ್ದು ಉಪನ್ಯಾಸ ವಿಧಾನದ ಜೊತೆಗೆ ಪ್ರಶ್ನೋತ್ತರ ವಿಧಾನವನ್ನು ಅಳವಡಿಸಿದಾಗ 9 ರಷ್ಟು, ಚರ್ಚಾ ವಿಧಾನವನ್ನು ಬಳಸಿದಾಗ 7 ರಷ್ಟು, ಸೆಮಿನಾರ್ ತಂತ್ರವನ್ನು ಬಳಸಿದಾಗ 5 ರಷ್ಟು ಮತ್ತು ಆಸನ ಬದಲಾವಣೆಯಿಂದ 3 ರಷ್ಟು ವಿದ್ಯಾರ್ಥಿಗಳು ತರಗತಿಯ ಬೋಧನಾ-ಕಲಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ. ತರಗತಿಯ ಬೋಧನೆಯಲ್ಲಿ ಒಟ್ಟು 24 ಜನ ಪ್ರಶಿಕ್ಷಣಾರ್ಥಿಗಳು ಸಕ್ರಿಯವಾಗಿ ಪಾಲ್ಗೊಳ್ಳುವುದು ಕಂಡು ಬರುತ್ತದೆ.

## ಪ್ರಶಿಕ್ಷಣಾರ್ಥಿಗಳ ಪಾಲ್ಗೊಳ್ಳುವಿಕೆಯ ಸಂಖ್ಯೆಯನ್ನು ತೋರಿಸುವ ರೇಖಾ ಚಿತ್ರ





ಮೇಲಿನ ರೇಖಾ ಚಿತ್ರವನ್ನು ಗಮನಿಸಿದಾಗ ಬೋಧನಾ ಕಲಿಕೆ ಪ್ರಕ್ರಿಯೆಯಲ್ಲಿ ಅನಾಸಕ್ತಿಯನ್ನು ತೋರಿಸುತ್ತಿದ್ದ 30 ಜನ ಪ್ರಶಿಕ್ಷಣಾರ್ಥಿಗಳಲ್ಲಿ 9 ಜನ ಪ್ರಶಿಕ್ಷಣಾರ್ಥಿಗಳು ಪ್ರಶ್ನೋತ್ತರ ವಿಧಾನದ ಬಳಕೆಯಿಂದಲೂ, 7 ಜನ ಚರ್ಚಾ ವಿಧಾನದಿಂದ, 5 ಜನ ಸೆಮಿನಾರ್ ಪದ್ಧತಿಯ ಅಳವಡಿಕೆಯಿಂದ ಮತ್ತು ಆಸನ ವ್ಯವಸ್ಥೆಯ ಬದಲಾವಣೆಯಿಂದ 3 ಜನ ಪ್ರಶಿಕ್ಷಣಾರ್ಥಿಗಳು ಬೋಧನೆ-ಕಲಿಕಾ ಪ್ರಕ್ರಿಯೆಯಲ್ಲಿ ಆಸಕ್ತಿ ತೋರಿಸುತ್ತಿರುವುದು ಕಂಡು ಬರುತ್ತದೆ. ಮೇಲಿನ ರೇಖಾ ಚಿತ್ರದಲ್ಲಿ X ಅಕ್ಷವು ಬೋಧನಾ ವಿಧಾನಗಳನ್ನೂ, Y ಅಕ್ಷವು ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯ ಸಂಖ್ಯೆಯನ್ನು ತೋರಿಸುತ್ತದೆ.

ವಿವಿಧ ಬೋಧನಾ ವಿಧಾನಗಳನ್ನು ಅಳವಡಿಸಿಕೊಂಡಿದ್ದರಿಂದ ಪ್ರಶಿಕ್ಷಣಾರ್ಥಿಗಳ ಪಾಲ್ಗೊಳ್ಳುವಿಕೆಯಲ್ಲಿ ಹೆಚ್ಚಾದ ಶೇಕಡಾವಾರು ಅಂಕಿ ಅಂಶವನ್ನು ತೋರಿಸುವ ಪಟ್ಟಿ

| ಕ್ರಮ ಸಂಖ್ಯೆ | ಬೋಧನಾ ವಿಧಾನ | ಪಾಲ್ಗೊಳ್ಳುವಿಕೆಯ ಸಂಖ್ಯೆ | ಶೇಕಡವಾರು ಪಾಲ್ಗೊಳ್ಳುವಿಕೆ |
|---|---|---|---|
| 1 | ಉಪನ್ಯಾಸ ವಿಧಾನ | 70 | 70 |
| 2 | ಪ್ರಶ್ನೋತ್ತರ ವಿಧಾನ | 09 | 79 |
| 3 | ಚರ್ಚಾ ವಿಧಾನ | 07 | 86 |
| 4 | ಸೆಮಿನಾರ್ ವಿಧಾನ | 05 | 91 |
| 5 | ಆಸನ ಬದಲಾವಣೆಯಾದಾಗ | 03 | 94 |

ಮೇಲಿನ ಪಟ್ಟಿಯಿಂದ ಕಂಡು ಬರುವುದೇನೆಂದರೆ ಕೇವಲ ಉಪನ್ಯಾಸ ವಿಧಾನದ ಬಳಕೆಯಿಂದ ಶೇ.70 ರಷ್ಟು ಪಾಲ್ಗೊಳ್ಳುವಿಕೆಯಿದ್ದು ಉಪನ್ಯಾಸ ವಿಧಾನದ ಜೊತೆಗೆ ಪ್ರಶ್ನೋತ್ತರ ವಿಧಾನ ಅಳವಡಿಸಿಕೊಂಡಾಗ ಪಾಲ್ಗೊಳ್ಳುವಿಕೆಯ ಶೇ.79 ರಷ್ಟು, ಚರ್ಚಾ ವಿಧಾನವನ್ನು ಅಳವಡಿಸಿಕೊಂಡಾಗ ಅದು ಶೇ.86 ರಷ್ಟು, ಸೆಮಿನಾರ್ ವಿಧಾನವನ್ನು ಅಳವಡಿಸಿಕೊಂಡಾಗ ಅದು ಶೇ.91 ರಷ್ಟಾಗಿದ್ದು ಪ್ರಶಿಕ್ಷಣಾರ್ಥಿಗಳ ಆಸನ ಬದಲಾವಣೆಯಿಂದ ಶೇ.94 ರಷ್ಟು ಪ್ರಶಿಕ್ಷಣಾರ್ಥಿಗಳು ತರಗತಿಯ ಬೋಧನಾ-ಕಲಿಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿರುವುದು ಕಂಡು ಬರುತ್ತದೆ.

## ಪ್ರಶಿಕ್ಷಣಾರ್ಥಿಗಳ ಶೇಕಡಾವಾರು ಪಾಲ್ಗೊಳ್ಳುವಿಕೆಯ ಮಟ್ಟವನ್ನು ತೋರಿಸುವ ರೇಖಾ ಚಿತ್ರ




ಮೇಲಿನ ರೇಖಾ ಚಿತ್ರದಲ್ಲಿ X ಅಕ್ಷವು ತರಗತಿಯಲ್ಲಿ ಅಳವಡಿಸಿಕೊಂಡಿರುವ ಬೋಧನಾ ವಿಧಾನಗಳನ್ನು Y ಅಕ್ಷವು ಪ್ರಶಿಕ್ಷಣಾರ್ಥಿಗಳ ಶೇಕಡಾವಾರು ಪಾಲ್ಗೊಳ್ಳುವಿಕೆಯನ್ನು ತೋರಿಸುತ್ತದೆ. ಉಪನ್ಯಾಸ ವಿಧಾನದಲ್ಲಿ ಪ್ರಶಿಕ್ಷಣಾರ್ಥಿಗಳ ಪಾಲ್ಗೊಳ್ಳುವಿಕೆಯು ಶೇ.70 ರಷ್ಟಾದರೆ ಉಪನ್ಯಾಸ ವಿಧಾನದ ಜೊತೆಗೆ ಪ್ರಶ್ನೋತ್ತರ ವಿಧಾನವನ್ನು ಬಳಸಿದಾಗ ಅದು ಶೇ.79, ಚರ್ಚಾ ವಿಧಾನವನ್ನು ಬಳಸಿದಾಗ ಶೇ.86 ಸೆಮಿನಾರ್ ಪದ್ಧತಿಯನ್ನು ಬಳಸಿದಾಗ ಶೇ.91 ರಷ್ಟು ಆಸನ ಬದಲಾವಣೆಯಿಂದ ಶೇ.94 ರಷ್ಟಾಗಿದೆ.

## 3.5 ಮಧ್ಯವರ್ತನಾ ಚಟುವಟಿಕೆಯ ಮೌಲ್ಯಮಾಪನ

ಈ ಕ್ರಿಯಾ ಸಂಶೋಧನೆಯಿಂದ ತಿಳಿದು ಬರುವುದೇನೆಂದರೆ ತರಗತಿಯಲ್ಲಿ ಅನ್ಯೋನ್ಯ ಕ್ರಿಯಾ ಪ್ರಕ್ರಿಯೆಯು ಪ್ರಮುಖಪಾತ್ರ ವಹಿಸುತ್ತದೆ. ವಿದ್ಯಾರ್ಥಿಗಳನ್ನು ಬೋಧನೆ-ಕಲಿಕೆಯತ್ತ ಪ್ರೇರೇಪಿಸಲು ಉಪನ್ಯಾಸಕರ ಏಕ ಮುಖ ಬೋಧನಾ ವಿಧಾನ ಹೆಚ್ಚು ಪರಿಣಾಮಕಾರಿಯಾಗಿರುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳನ್ನು ಕಲಿಕೆಯತ್ತ ಪ್ರೇರೇಪಿಸಲು ತರಗತಿಯಲ್ಲಿ ಉಪನ್ಯಾಸಕ ಮತ್ತು ವಿದ್ಯಾರ್ಥಿಗಳ ನಡುವೆ ಪರಸ್ಪರ ಅನ್ಯೋನ್ಯ ಕ್ರಿಯೆ ಇರಬೇಕು. ಈ ಅನ್ಯೋನ್ಯ ಕ್ರಿಯಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ಭಾವನೆಗಳನ್ನು, ವಿಚಾರಗಳನ್ನೂ ವ್ಯಕ್ತಪಡಿಸಲು ಅವಕಾಶವಿರುತ್ತದೆ. ಬೋಧನೆಯು ಕೇವಲ ಉಪಾಧ್ಯಾಯ ಕೇಂದ್ರೀಕೃತವಾಗಿದೆ ವಿದ್ಯಾರ್ಥಿಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂಬುದಾಗಿದೆ. ಆದ್ದರಿಂದ ಉಪನ್ಯಾಸಕರ ಉಪನ್ಯಾಸ ವಿಧಾನದ ಜೊತೆಗೆ ಪ್ರಶ್ನೋತ್ತರ ವಿಧಾನ, ಚರ್ಚಾ ವಿಧಾನ ಮತ್ತು ಸೆಮಿನಾರ್ ಮಾಡಿಸುವ ಪದ್ಧತಿಯಿಂದ ವಿದ್ಯಾರ್ಥಿಗಳ ಆಸಕ್ತಿ ಕೆರಳಿಸಿ ಅವರನ್ನು ಕಲಿಕೆಯತ್ತ ಪ್ರಚೋದಿಸಬಹುದಾಗಿದೆ.

ಉಪನ್ಯಾಸಕರ ಏಕಮುಖ ಬೋಧನೆಯಲ್ಲಿ ಶೇ.70 ರಷ್ಟು ವಿದ್ಯಾರ್ಥಿಗಳು ಪಾಲ್ಗೊಂಡರೆ ಪ್ರಶ್ನೋತ್ತರ ವಿಧಾನ, ಚರ್ಚಾ ವಿಧಾನ ಮತ್ತು ಸೆಮಿನಾರ್ ವಿಧಾನಗಳ ಅಳವಡಿಕೆಯಿಂದ ಶೇ.94 ರಷ್ಟು ಪಾಲ್ಗೊಳ್ಳುವಿಕೆ ಕಂಡುಬಂದಿದೆ.

## 3.6 ಸ್ವವಿಮರ್ಶೆ ಮತ್ತು ಕೈಗೊಂಡ ನಿರ್ಧಾರಗಳು

ಸ್ವವಿಮರ್ಶೆಯು ಕ್ರಿಯಾ ಸಂಶೋಧನೆಯ ಕೇಂದ್ರ ಬಿಂದುವಾಗಿದ್ದು ಈ ಕ್ರಿಯಾ ಸಂಶೋಧನೆಯಿಂದ ಕಂಡು ಬರುವುದೇನೆಂದರೆ ಕೇವಲ ಉಪನ್ಯಾಸ ವಿಧಾನವೊಂದನ್ನೇ ತರಗತಿಯಲ್ಲಿ ಬಳಸುವುದರಿಂದ ಬೋಧನೆ-ಕಲಿಕಾ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳಿಗೆ ಅವಧಾನವಿರುವುದು ಸಾಧ್ಯವಿಲ್ಲ. ಇದಕ್ಕೆ ಅನೇಕ ಅಂಶಗಳು ಕಾರಣವಾಗಿದೆ.

- ಬೋಧನೆ ಪರಿಣಾಮಕಾರಿಯಾಗಿಲ್ಲದಿರುವುದು.
- ಉಪನ್ಯಾಸಕರು ಕಲಿಕೆಯತ್ತ ವಿದ್ಯಾರ್ಥಿಗಳನ್ನು ಪ್ರಚೋದಿಸುವಲ್ಲಿ ಅಸಮರ್ಥರಾಗಿರುವುದು.
- ಬೋಧನೆಯು ಏಕಮುಖವಾಗಿ ನೀರಸವಗಿರುವುದು.
- ಬೋಧನೆಯ ಮಧ್ಯೆ ಆಗಾಗ್ಗೆ ಪ್ರಶ್ನೆ ಕೇಳದಿರುವುದು.
- ವಿದ್ಯಾರ್ಥಿಗಳ ಅಶಿಸ್ತಿನ ವರ್ತನೆ.

ಈ ಅಂಶಗಳನ್ನು ಗಮನಿಸಿದಾಗ ಉಪನ್ಯಾಸಕರ ಏಕಮುಖವಾದ ಬೋಧನೆಯೇ ಶೇ.30 ರಷ್ಟು ವಿದ್ಯಾರ್ಥಿಗಳು ಪಾಠದ ಬಗ್ಗೆ ಅನಾಸಕ್ತಿ ತಾಳಲು ಕಾರಣವೆಂಬುದು ಕಂಡು ಬರುತ್ತದೆ.

ಉಪನ್ಯಾಸಕರು ತರಗತಿಗೆ ಪ್ರವೇಶಿಸಿದ ನಂತರ ತರಗತಿಯಲ್ಲಿ ಕಲಿಕೆಯ ವಾತಾವರಣವನ್ನು ಸೃಷ್ಟಿಸಬೇಕಾಗುತ್ತದೆ. ವಿದ್ಯಾರ್ಥಿಗಳು ಕಲಿಯಲು ಮಾನಸಿಕವಾಗಿ ಸಿದ್ಧರಾಗುವಂತೆ ಮಾಡಬೇಕಾಗುತ್ತದೆ. ಇದಕ್ಕಾಗಿ ಉಪನ್ಯಾಸಕರು ವಿದ್ಯಾರ್ಥಿಗಳನ್ನು ಪ್ರಶ್ನೆಗಳನ್ನು ಕೇಳುವುದು ಅವಶ್ಯಕವೆಂಬುದು ಈ ಕ್ರಿಯಾ ಸಂಶೋಧನೆಯಿಂದ ಕಂಡುಬಂದಿದೆ. ಈ ಸಂದರ್ಭದಲ್ಲಿ ಉಪನ್ಯಾಸಕರು ಕೇಳುವ ಪ್ರಶ್ನೆಗಳ ವಸ್ತು ವಿಷಯಕ್ಕೆ ಸಂಬಂಧಪಟ್ಟಿರಬೇಕು, ಪ್ರಶ್ನೆಗಳು ನೇರವಾಗಿಯೂ, ವ್ಯಾಕರಣ ಬದ್ಧವಗಿಯೂ, ಎಲ್ಲರಿಗೂ ಕೇಳುವಂತೆಯೂ ಮತ್ತು ವಿದ್ಯಾರ್ಥಿಗಳ ಆಲೋಚಿಸಿ ಉತ್ತರಿಸುವಂತೆ ಇರಬೇಕು. ವಿದ್ಯಾರ್ಥಿಗಳು ಕೇವಲ ನೆನಪಿನ ಶಕ್ತಿಯಿಂದ ಮಾತ್ರವಲ್ಲದೆ ಯೋಚಿಸಿ ಉತ್ತರಿಸುವಂತಹ ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಪ್ರಶ್ನೆಗಳನ್ನು ಕೇಳುವುದರಿಂದ ವಿದ್ಯಾರ್ಥಿಗಳ ವಿಮರ್ಶಾ ಬುದ್ಧಿ ಹೆಚ್ಚಾಗುತ್ತದೆ. ಪ್ರಶ್ನಿಸುವುದರ ಮೂಲಕ ವಿದ್ಯಾರ್ಥಿಗಳಿಂದ ಬಂದ ಪ್ರತಿಕ್ರಿಯೆಯನ್ನು ವಿಮರ್ಶಿಸಿ ಅವರನ್ನು ಕಲಿಕೆಗೆ ಪ್ರಚೋದಿಸಬೇಕಾಗುತ್ತದೆ.

ತರಗತಿಯ ಬೋಧನಾ–ಕಲಿಕೆ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಚರ್ಚಾ ವಿಧಾನವನ್ನು ಬಳಸಿಕೊಳ್ಳಲಾಗಿದೆ. ಚರ್ಚೆಯ ವಿಷಯವು ವಿದ್ಯಾರ್ಥಿಗಳ ಪ್ರಭುದ್ಧತೆಗೆ ತಕ್ಕಂತೆ ಇರಬೇಕಾಗುತ್ತದೆ. ವಿದ್ಯಾರ್ಥಿಗಳ ಅಗತ್ಯ ಮತ್ತು ಆಸಕ್ತಿಗೆ ಅನುಗುಣವಾಗಿರುವಂತ ವಿಷಯವನ್ನು ಚರ್ಚೆಗೆ ಕೊಡಬೇಕಾಗುತ್ತದೆ. ಇದು ಏಕಮುಖ

ಬೋಧನೆಗೆ ಬದಲಾಗಿ ವಿದ್ಯಾರ್ಥಿಗಳಿಗೂ ತಮ್ಮ ವಿಚಾರವನ್ನು ವ್ಯಕ್ತಪಡಿಸಲು ಅವಕಾಶ ಮಾಡಿಕೊಡುವುದರಿಂದ ಏಕಾಗ್ರತೆಯಿಂದ ಕುಳಿತು ಪಾಠ ಕೇಳುತ್ತಾರೆ.

ಈ ಕ್ರಿಯಾ ಸಂಶೋಧನೆಯಲ್ಲಿ ವಿದ್ಯಾರ್ಥಿಗಳನ್ನು ತರಗತಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಸೆಮಿನಾರ್ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

ಈ ಸೆಮಿನಾರ್‌ಗಳನ್ನು ಹಿಂದಿನ ತರಗತಿಯಲ್ಲಿ ಬೋಧಿಸಿಲಾದ ವಿಷಯಕ್ಕೆ ಸಂಬಂಧಪಟ್ಟಂತೆ, ಕಲಿಕೆಯಲ್ಲಿ ಅನಾಸಕ್ತಿಯನ್ನು ಹೊಂದಿದ್ದ ವಿದ್ಯಾರ್ಥಿಗಳೇ ಮಾಡುವಂತೆ ಅವಕಾಶ ಕಲ್ಪಿಸಲಾಗಿದೆ. ಈ ವಿಧಾನದ ಉದ್ದೇಶವೆಂದರೆ ಹಿಂದಿನ ತರಗತಿಯ ಪಾಠದ ವಿಷಯವನ್ನು ಮುಂದಿನ ತರಗತಿಯಲ್ಲಿ ಸೆಮಿನಾರ್ ರೂಪದಲ್ಲಿ ಮಂಡಿಸಬೇಕಾಗಿರುವುದರಿಂದ ವಿದ್ಯಾರ್ಥಿಯು ಅನಿವಾರ್ಯವಾಗಿ ಆಸಕ್ತಿಯಿಂದ ಪಾಠ ಬೋಧನೆಯನ್ನು ಆಲಿಸಬೇಕಾಗುತ್ತದೆ. ಈ ವಿಧಾನದಿಂದಲೂ ಸಹ ವಿದ್ಯಾರ್ಥಿಗಳ ಸಕ್ರಿಯ ಪಾಲ್ಗೊಳ್ಳುವಿಕೆ ಸಾಧ್ಯವಾಗಿದೆ.

ಮೇಲಿನ ಎಲ್ಲಾ ವಿಧಾನಗಳ ಜೊತೆಗೆ ಅನಾಸಕ್ತ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸಲು ಅವರು ತರಗತಿಯಲ್ಲಿ ಇತರ ಚಟುವಟಿಕೆಗಳಲ್ಲಿ ಸಹಪಾಠಿಗಳೊಂದಿಗೆ ತೊಡಗದಂತೆ ಮಾಡಲು ಆಸನ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ಮಾಡಲಾಗಿದೆ.

ಒಟ್ಟಿನಲ್ಲಿ ಮೇಲೆ ತಿಳಿಸಿರುವ ಎಲ್ಲಾ ಬೋಧನಾ ತಂತ್ರಗಳಿಂದ ಶೇ.94 ರಷ್ಟು ವಿದ್ಯಾರ್ಥಿಗಳು ಉಪನ್ಯಾಸಕರ ಬೋಧನೆಯನ್ನು ಆಸಕ್ತಿಯಿಂದ ಕೇಳುವುದು ಕಂಡು ಬಂದಿದೆ. ಆದ್ದರಿಂದ ತರಗತಿಯ ಅನ್ಯೋನ್ಯ-ಕ್ರಿಯಾ ಪ್ರಕ್ರಿಯೆಯ ಚಟುವಟಿಕೆಗಳು ಬೋಧನೆ-ಕಲಿಕಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗಾಹಿಸುವಂತೆ ಮಾಡುತ್ತದೆ.

## 3.7 ವಿದ್ಯಾರ್ಥಿಗಳು ತರಗತಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಸಲಹೆಗಳು

ಈ ಕ್ರಿಯಾ ಸಂಶೋಧನೆಯಲ್ಲಿ ಅಳವಡಿಸಲಾದ ಮಧ್ಯವರ್ತನಾ ಚಟುವಟಿಕೆಗಳಿಂದ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯಲ್ಲಿ ಸಾಕಷ್ಟು ಹೆಚ್ಚಳ ಕಂಡು ಬಂದಿದ್ದರೂ ನೂರಕ್ಕೆ ನೂರರಷ್ಟು ಸುಧಾರಣೆ ಕಂಡು ಬರದಿರುವುದನ್ನೂ ಗಮನಿಸಬಹುದಾಗಿದೆ. ಆದ್ದರಿಂದ ಈ ದಿಶೆಯಲ್ಲಿ ಇನ್ನೂ ಹೆಚ್ಚಿನ ಸುಧಾರಣೆಯನ್ನು ತರಲು ಈ ಕೆಳಗಿನಂತೆ ಸಲಹೆಗಳನ್ನು ನೀಡಲಾಗಿದೆ.

- ತರಗತಿಯ ಬೋಧನೆ–ಕಲಿಕಾ ಚಟುವಟಿಕೆಯಲ್ಲಿ ಅನಾಸಕ್ತಿಯನ್ನು ಹೊಂದಿರುವ ವಿದ್ಯಾರ್ಥಿಗಳ ಕೌಟುಂಬಿಕ ಹಿನ್ನೆಲೆಯನ್ನು ತಿಳಿದುಕೊಳ್ಳುವುದು.
- ವಿದ್ಯಾರ್ಥಿಗಳು ವಸತಿ ನಿಲಯಗಳಿಂದ ಬಂದಿದ್ದರೆ ಅವರ ಸ್ನೇಹಿತರನ್ನು ವಿಚಾರಿಸಿ ವಿದ್ಯಾರ್ಥಿಯ ಬಗ್ಗೆ ಮಾಹಿತಿ ಸಂಗ್ರಹಿಸುವುದು.
- ವಿದ್ಯಾರ್ಥಿಗಳನ್ನು ವೈಯುಕ್ತಿಕವಾಗಿ ಕರೆದು ಶೈಕ್ಷಣಿಕ ಸಮಸ್ಯೆಗಳಿದ್ದರೆ ಬಗೆಹರಿಸುವುದು.
- ವಿದ್ಯಾರ್ಥಿಗಳನ್ನು ಪ್ರಶಂಸಿಸುವುದರ ಮೂಲಕ ಕಲಿಕೆಗೆ ಪ್ರಚೋದಿಸುವುದು.
- ವಿದ್ಯಾರ್ಥಿಗಳತ್ತ ವೈಯುಕ್ತಿಕ ಗಮನ ಹರಿಸುವುದು.
- ಪಠ್ಯ ವಿಷಯಕ್ಕೆ ಸಂಬಂಧಿಸಿದಂತೆ ಸಮರ್ಪಕವಾದ ಬೋಧನೋಪಕರಣಗಳನ್ನು ಬಳಸುವುದು.
- ಪಠ್ಯ ಪುಸ್ತಕದಲ್ಲಿರುವ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ನೀಡುವ ಗ್ರಂಥಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ಒದಗಿಸಿ ಅವರನ್ನು ಸ್ವ ಅಧ್ಯಯನಕ್ಕೆ ಪ್ರೇರೇಪಿಸುವುದು.
- ಪಠ್ಯದಲ್ಲಿರುವ ವಿಷಯ ಪರಿಕಲ್ಪನೆಗಳನ್ನು ವಿದ್ಯಾರ್ಥಿಗಳಿಗೆ ಅರ್ಥವಾಗುವಂತೆ ಮಾಡಲು ಹೆಚ್ಚು ವಿವರಣೆಯನ್ನು ನೀಡುವುದು.

ಮೇಲಿನ ಎಲ್ಲಾ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಉಪನ್ಯಾಸಕರು ಮತ್ತಷ್ಟು ಸೂಕ್ತ ಚಟುವಟಿಕೆಗಳನ್ನು ತಮ್ಮ ತರಗತಿಯ ಸನ್ನಿವೇಶಕ್ಕೆ ಅನುಗುಣವಾಗಿ ಅಳವಡಿಸಿಕೊಂಡು ಬೋಧನೆಯನ್ನು ಪರಿಣಾಮಕಾರಿಯಾಗಿ ಮಾಡುವುದರ ಮೂಲಕ ವಿದ್ಯಾರ್ಥಿಗಳು ಬೋಧನೆ–ಕಲಿಕಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಬಹುದು.

# ಅನುಬಂಧಗಳು

# ಅನುಬಂಧಗಳು

## 1. ದಿನಚರಿ

ದಿನಾಂಕ 04-01-2005 ರಂದು ಪೂರ್ವ ಸಿದ್ಧತೆಯೊಂದಿಗೆ 100 ಜನ ಪ್ರಶಿಕ್ಷಣಾರ್ಥಿಗಳಿರುವ ತರಗತಿಗೆ ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ ವಿಷಯದ ಪಾಠ ಬೋಧನೆಗೆ ಪ್ರಾರಂಭಿಸಿ ಪ್ರಶಿಕ್ಷಣಾರ್ಥಿಗಳನ್ನು ಗಮನಿಸಿದಾಗ ಶೇ.30 ರಷ್ಟು ಪ್ರಶಿಕ್ಷಣಾರ್ಥಿಗಳ ಪಾಠದ ಕಡೆ ಗಮನ ಹರಿಸದಿರುವುದು ಕಂಡು ಬಂದಿದೆ.

ದಿನಾಂಕ 05-01-2005 ರಂದು ಸಹ ಇದೇ ರೀತಿಯ ಪ್ರಶಿಕ್ಷಣಾರ್ಥಿಗಳ ಅನಾಸಕ್ತಿ ಕಂಡು ಬಂದಿದೆ.

ಈ ಬಗ್ಗೆ ಹಿರಿಯ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ ವಿದ್ಯಾರ್ಥಿಗಳು ಸಕ್ರಿಯವಾಗಿ ಬೋಧನಾ-ಕಲಿಕೆ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲು ಕೆಳಕಂಡ ವಿಧಾನಗಳನ್ನು ಬೋಧನೆಯಲ್ಲಿ ಅಳವಡಿಸಿಕೊಳ್ಳಲು ನಿರ್ಧರಿಸಲಾಯಿತು.

- ಪ್ರಶ್ನೋತ್ತರ ವಿಧಾನ
- ಚರ್ಚಾ ವಿಧಾನ
- ಸೆಮಿನಾರ್ ವಿಧಾನ
- ಆಸನ ವ್ಯವಸ್ಥೆಯ ಬದಲಾವಣೆ

ದಿನಾಂಕ 10-01-2005 ರಂದು ಉಪನ್ಯಾಸ ವಿಧಾನದ ಜೊತೆಗೆ ಪ್ರಶ್ನೋತ್ತರ ವಿಧಾನವನ್ನು ಬಳಸಿ ಪ್ರಶಿಕ್ಷಣಾರ್ಥಿಗಳಿಗೆ ಉಪನ್ಯಾಸದ ನಡುವೆ ಆಗಾಗ್ಗೆ ಪ್ರಶ್ನೆ ಕೇಳಲಾಯಿತು. ಈ ಸಂದರ್ಭದಲ್ಲಿ ಪಾಠದಲ್ಲಿ ಅನಾಸಕ್ತಿಯನ್ನು ಹೊಂದಿರುವ ವಿದ್ಯಾರ್ಥಿಗಳ ಕಡೆ ಗಮನ ಹರಿಸಿ ಅವರನ್ನೇ ಪ್ರಶಿಸಲಾಯಿತು. ಪಾಠ ಬೋಧನೆಯ ಪ್ರಾರಂಭದಲ್ಲಿ ಆರಂಭಿಕ ಪ್ರಶ್ನೆಗಳಿಗೆ ಅಂತಹ ಉತ್ತಮವಾದ ಪ್ರತಿಕ್ರಿಯೆ ಕಂಡು ಬರದಿದ್ದರೂ ನಂತರ ಉಪನ್ಯಾಸಕರು ಪ್ರಶ್ನೆ ಕೇಳುವುದು ಮುಂದುವರಿದಾಗ ವಿದ್ಯಾರ್ಥಿಗಳು ಪಾಠ ಕೇಳುವ ಕಡೆ ಗಮನ ಹರಿಸಿ ಉಪನ್ಯಾಸಕರ ಪ್ರಶ್ನೆಗಳಿಗೆ

ಉತ್ತರಿಸಲು ತೊಡಗಿದರು. ಈ ದಿನ ಪಾಠದಲ್ಲಿ ಅನಾಸಕ್ತಿಯನ್ನು ಹೊಂದಿದ್ದ ಇಬ್ಬರು ವಿದ್ಯಾರ್ಥಿಗಳು ಆಸಕ್ತಿಯಿಂದ ಪಾಠ ಕೇಳಲು ಆರಂಭಿಸಿದರು.

ಇದೇ ವಿಧಾನವನ್ನು 2ನೇ ದಿನ ಅಂದರೆ 11-01-2005 ರಂದು ಮುಂದುವರಿಸಿದಾಗ 3 ಮಂದಿ ವಿದ್ಯಾರ್ಥಿಗಳಲ್ಲಿ ಸುಧಾರಣೆ ಕಂಡು ಬಂದು ತರಗತಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

3ನೇ ದಿನ 12-01-2005 ರಂದು ಈ ವಿಧಾನದಿಂದ 4 ಮಂದಿ ಪಾಠದಲ್ಲಿ ಅನಾಸಕ್ತಿಯನ್ನು ಹೊಂದಿದ್ದ ವಿದ್ಯಾರ್ಥಿಗಳು ಆಸಕ್ತಿಯಿಂದ ಪಾಠ ಬೋಧನೆಯನ್ನು ಆಲಿಸಲು ಆರಂಭಿಸಿದರು. ಇವೇ ಬೋಧನಾ ತಂತ್ರವನ್ನು 4ನೇ ದಿನದಂದು 17-01-2005 ರಂದು ಮುಂದುವರಿಸಿದಾಗ ವಿದ್ಯಾರ್ಥಿಗಳು ಪಾಲ್ಗೊಳ್ಳುವಿಕೆಯಲ್ಲಿ ಅಂತಹ ಬದಲಾವಣೆ ಕಂಡುಬರಲಿಲ್ಲ.

ಆದ್ದರಿಂದ ಬೋಧನಾ ವಿಧಾನದಲ್ಲಿ ಉಪನ್ಯಾಸ ಪದ್ಧತಿಯ ಜೊತೆಗೆ, ಪ್ರಶ್ನೋತ್ತರ ವಿಧಾನದ ಜೊತೆಗೆ ಚರ್ಚಾ ವಿಧಾನವನ್ನು ಅಳವಡಿಸಿಕೊಳ್ಳಲು ನಿರ್ಧರಿಸಲಾಯಿತು.

ದಿನಾಂಕ 18-01-2005 ರಂದು ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡಿ ಗುಂಪಿನಲ್ಲಿ ನಾಯಕ ಮತ್ತು ಉಪನಾಯಕರನ್ನು ನೇಮಿಸಲಾಯಿತು. ಪಾಠದ ವಿಷಯವನ್ನು ಚರ್ಚಿಸಲು ಅವಕಾಶ ಕೊಟ್ಟ ನಂತರ ಗುಂಪಿನ ಸದಸ್ಯರ ವಿಚಾರಗಳನ್ನು ಕ್ರೋಢೀಕರಿಸಲು ನಾಯಕ ಉಪನಾಯಕರಿಗೆ ತಿಳಿಸಲಾಯಿತು. ಈ ನಾಯಕರು ಪಾಠದಲ್ಲಿ ಅನಾಸಕ್ತಿಯನ್ನು ಹೊಂದಿದವರಾಗಿದ್ದು ಚರ್ಚಿಸಿದ ವಿಷಯವನ್ನು ಮಂಡಿಸಬೇಕಾದ್ದರಿಂದ ಅಂದು 4 ಜನ ವಿದ್ಯಾರ್ಥಿಗಳು ತರಗತಿಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವುದು ಕಂಡುಬಂದಿದೆ.

ದಿನಾಂಕ 19-01-2005 ರಂದು ಇದೇ ಚರ್ಚಾ ವಿಧಾನದ ಬಳಕೆಯಿಂದ ಪಾಠದಲ್ಲಿ ಅನಾಸಕ್ತಿಯನ್ನು ಹೊಂದಿದ್ದು 3 ಮಂದಿ ವಿದ್ಯಾರ್ಥಿಗಳು ಸಕ್ರಿಯವಾಗಿ ಕಲಿಕೆಯಲ್ಲಿ ಪಾಲ್ಗೊಂಡರು.

ದಿನಾಂಕ 24-01-2005 ರಂದು ಇವೇ ವಿಧಾನವನ್ನು ಮುಂದುವರಿಸಲಾಯಿತು. ಭಾಗವಹಿಸುವವರ ಸಂಖ್ಯೆಯಲ್ಲಿ ಹೆಚ್ಚಳವೇನೂ ಕಂಡು ಬರಲಿಲ್ಲ.

ಆದ್ದರಿಂದ ಮೇಲಿನ ವಿಧಾನಗಳ ಜೊತೆಗೆ ವಿದ್ಯಾರ್ಥಿಗಳಿಂದ ಸೆಮಿನಾರ್ ಮಾಡಿಸುವ ಪದ್ಧತಿಯನ್ನು ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು. ಈ ಸೆಮಿನಾರ್ ಪದ್ಧತಿಯಲ್ಲಿ ಹಿಂದಿನ ತರಗತಿಯ ಪಾಠದ ವಿಷಯಗಳಿಗೆ ಸಂಬಂಧಿಸಿದಂತೆ ನಡೆಸಲಾಯಿತು. ಇಲ್ಲಿಯೂ ಸಹ ಹೆಚ್ಚಾಗಿ ಪಾಠದಲ್ಲಿ ಆಸಕ್ತಿಯನ್ನು ಹೊಂದಿರದ ವಿದ್ಯಾರ್ಥಿಗಳನ್ನೇ ಸೆಮಿನಾರ್ ಮಾಡಲು ಸೂಚಿಸಲಾಯಿತು. ದಿನಾಂಕ 25-01-2005 ರಂದು ಈ ವಿಧಾನವನ್ನು ತರಗತಿಯಲ್ಲಿ ಅಳವಡಿಸಿಕೊಂಡಾಗ 2 ಜನ ವಿದ್ಯಾರ್ಥಿಗಳು ಬೋಧನಾ-ಕಲಿಕೆ ಚಟುವಟಿಕೆಯನ್ನು ಆಸಕ್ತಿಯಿಂದ ಪಾಲ್ಗೊಂಡರು.

ಈ ವಿಧಾನವನ್ನು ದಿನಾಂಕ 01-02-2005 ರಂದು ಮುಂದುವರಿಸಿದಾಗ 3 ಜನ ವಿದ್ಯಾರ್ಥಿಗಳು ಸೆಮಿನಾರ್ ಚಟುವಟಿಕೆಯಲ್ಲಿ ಸಕ್ರಿಯ ಪಾತ್ರ ವಹಿಸಿದರು.

ಮೇಲಿನ ಎಲ್ಲಾ ವಿಧಾನಗಳಿಂದ ಪಾಠ ಬೋಧನೆಯ ಆಲಿಸುವಿಕೆಯಲ್ಲಿ ಅನಾಸಕ್ತಿಯನ್ನು ಹೊಂದಿದ್ದ 30 ವಿದ್ಯಾರ್ಥಿಗಳಲ್ಲಿ 21 ಮಂದಿ ವಿದ್ಯಾರ್ಥಿಗಳು ಬೋಧನಾ ಕಲಿಕೆ ಚಟುವಟಿಕೆಯಲ್ಲಿ ಆಸಕ್ತಿಯನ್ನು ತೋರಿಸಿದ್ದಾರೆ. ಇನ್ನುಳಿದ 9 ಮಂದಿ ಪ್ರಶಿಕ್ಷಣಾರ್ಥಿಗಳಿಗೆ ಪಾಠದ ಕಡೆ ಏಕಾಗ್ರತೆಯನ್ನು ಸಾಧಿಸುವಂತೆ ಮಾಡಲು ಅವರ ಸ್ಥಳ ಬದಲಾವಣೆಗೆ ಗಮನಹರಿಸಲಾಯಿತು.

ಈ ರೀತಿಯ ಸ್ಥಳ ಬದಲಾವಣೆಯಿಂದ ದಿನಾಂಕ 02-02-2005 ರಿಂದ 3 ಜನ ವಿದ್ಯಾರ್ಥಿಗಳು ಕಲಿಕೆಯಲ್ಲಿ ಆಸಕ್ತಿ ತೋರಿಸಿದ್ದು ಇನ್ನೂ 6 ಜನ ಪ್ರಶಿಕ್ಷಣಾರ್ಥಿಗಳು ಎಂದಿನಂತೆ ಪಾಠದ ಕಡೆ ಗಮನ ಹರಿಸದೆ ಇತರ ಚಟುವಟಿಕೆಗಳಲ್ಲಿ ತಲ್ಲೀನರಾಗಿರುವುದು ಕಂಡು ಬಂದಿರುತ್ತೆ.

# ಪರಾಮರ್ಶನ ಗ್ರಂಥಗಳು

# ಪರಾಮರ್ಶನ ಗ್ರಂಥಗಳು


- ವಾರ್ಷಿಕ ಕೈಪಿಡಿ (Prospectus)

  ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ಮೈಸೂರು

- Training Manual of Action Research for the CTE Faculty of Karnataka

  – Regional Institute of Education, Mysore.

- Quality Assurance of Professional Practice Through Action Research

  – Dr. Murthy C.G.V.,

  Regional Institute of Education, Mysore

- Becoming Better Teacher

  – Passi. B.K

- Techniques of Teaching

  – Agarwal. A.C..